ರಾಮಕೃಷ್ಣ ಮಹಾಸಂಘ ಕನ್ನಡದಲ್ಲಿ ಪ್ರಕಟಿಸಿದ ವೇದಾಂತ ಗ್ರಂಥಗಳು

ಸ್ವಾಮಿ ಪ್ರಮಥಾಧಿಪಾನಂದ

ದಿವ್ಯತ್ರಯರ ಜೀವನದೊಂದಿಗೆ ವೇದಾಂತ ದರ್ಶನವು ಹಾಸುಹೊಕ್ಕಾಗಿರುವುದರಿಂದ, ನಿಜವಾದ ಆಧ್ಯಾತ್ಮಿಕತೆಯೆಂದರೆ ಶಾಸ್ತ್ರ ಹಾಗೂ ಜೀವನ ಎರಡರ ಸಮನ್ವಯ ಎಂದು ಅರಿತುಕೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ರಾಮಕೃಷ್ಣ ಮಹಾಸಂಘವು ದಿವ್ಯತ್ರಯರ ಜೀವನದೊಂದಿಗೆ ಅನೇಕ ವೇದಾಂತ ಗ್ರಂಥಗಳನ್ನೂ ಪ್ರಕಟಿಸುತ್ತಿದೆ. ಈ ವಿಷಯವನ್ನು ವಿವರಿಸಿರುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಉಪಕ್ರಮ

ವೇದಾಂತವೆಂದರೆ ವೇದಗಳ ಸಾರತಮ ಭಾಗ. ವಿದ್ವಾಂಸರ ಪ್ರಕಾರ – **ವೇದಾಂತೋ ನಾಮ ಉಪನಿಷತ್ಪ್ರಮಾಣಂ ತದುಪಕಾರೀಣಿ ಶಾರೀರಕಸೂತ್ರಾದೀನಿ ಚ ।** – 'ವೇದಾಂತವೆಂದರೆ ಯಾವ ವಸ್ತುವಿಗೆ ಅಥವಾ ವಿಷಯಕ್ಕೆ ಉಪನಿಷತ್ತುಗಳೇ ಪ್ರಮಾಣಗಳೋ ಅದು, ಅದಲ್ಲದೇ ಪ್ರಮಾಣಗಳಾದ ಉಪನಿಷತ್ತುಗಳು ಮತ್ತು ಅವಕ್ಕೆ ಪೂರಕವಾದ ಬ್ರಹ್ಮಸೂತ್ರ ಮೊದಲಾದವುಗಳು.' ರೂಢಿಯಲ್ಲಿ ವೇದಾಂತ ಶಬ್ದವು ಉಪನಿಷತ್ತುಗಳು, ವೇದಾಂತ ದರ್ಶನ, ಬ್ರಹ್ಮಸೂತ್ರಗಳು, ಭಗವದ್ಗೀತೆ ಮತ್ತು ವಿವೇಕ ಚೂಡಾಮಣಿಯೇ ಮೊದಲಾದ ವೇದಾಂತದ ಪ್ರಕರಣ ಗ್ರಂಥಗಳನ್ನು ಒಳಗೊಂಡಿದೆ.

ವೇದಾಂತ ಗ್ರಂಥಗಳು ಋಷಿಗಳ ಅನುಭವಕ್ಕೆ ಬಂದ ಇಂದ್ರಿಯಾತೀತ ಅಲೌಕಿಕ ಸತ್ಯದ ಸಾರಸಂಗ್ರಹ. ಈ ಸತ್ಯವು ಸೂಕ್ಷ್ಮವಾದ ಯೋಗಶಕ್ತಿಯಿಂದ ಮಾತ್ರ ಗ್ರಾಹ್ಯ ಮತ್ತು ಎಲ್ಲಾ ಕಾಲದಲ್ಲಿ ಮತ್ತು ಸ್ಥಾನಗಳಲ್ಲೂ ಬಾಧಿತವಾಗದೇ ಇರುವ ವಾಸ್ತವತೆ. ''ಇದು ಮಾತ್ರವೇ ಜನರನ್ನು ಮಾಯೆಯಿಂದ ಪಾರು ಮಾಡಿ ಅವರಿಗೆ ಮುಕ್ತಿಯನ್ನು ದೊರಕಿಸಿಕೊಡುತ್ತದೆ. ವೇದಾಂತದ ಪ್ರಾಮಾಣ್ಯವು ಕಾಲ, ದೇಶ, ಪಾತ್ರಗಳ ಮಿತಿಗೆ ಒಳಪಡದೇ ಇರುವುದರಿಂದ ಅದು ಸಮಸ್ತ ಮಾನವತೆಗೂ ಶಾಶ್ವತ ವಿಶ್ವ ಧರ್ಮವನ್ನು ಬೋಧಿಸುವ ಏಕೈಕ ಶಾಸ್ತ್ರವಾಗಿ ಉಳಿದಿದೆ'' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ಸ್ವಾಮಿ ವಿವೇಕಾನಂದರ ಪ್ರಕಾರ ತಮ್ಮ ಜೀವನೋದ್ದೇಶದ ಸಾರವೆಂದರೆ – ಪ್ರತಿಯೊಬ್ಬರಿಗೂ ಅವರವರಲ್ಲಿ ಸುಪ್ತವಾಗಿರುವ ದೈವಿಕತೆಯನ್ನು ಬೋಧಿಸಿ ಅದನ್ನು ಜೀವನದ ಪ್ರತಿಯೊಂದು ಹೆಜ್ಜೆಯಲ್ಲಿಯೂ ವ್ಯಕ್ತಪಡಿಸುವಂತೆ ಮಾಡುವುದು. ಅವರೇ ಹೇಳಿರುವಂತೆ ವೇದಾಂತ ತತ್ತ್ವಗಳು ಪ್ರಪಂಚದ ಕೆಲವೇ ವಿದ್ವಾಂಸರ ಸ್ವತ್ತಾಗದೇ, ಅದು ಮನೆಮನೆಗಳಿಗೆ ಪ್ರತಿಯೊಬ್ಬರಿಗೂ ತಲುಪುವಂತಾಗಬೇಕು. ಯುಗಾವತಾರರಾದ ಭಗವಾನ್ ಶ್ರೀರಾಮಕೃಷ್ಣರೇ ಬುನಾದಿ ಹಾಕಿದ, ಅವರ ಶಿಷ್ಯಪ್ರಮುಖರಾದ ಸ್ವಾಮಿ ವಿವೇಕಾನಂದರೇ ಬೆಳೆಸಿದ ರಾಮಕೃಷ್ಣ ಮಠವು ಮನೆಮನೆಗೂ, ಪ್ರತಿವ್ಯಕ್ತಿಗೂ ವೇದಾಂತದ ಪ್ರಚಾರವನ್ನು ಕೈಗೊಂಡ ಮೊಟ್ಟ ಮೊದಲ ಸಂಸ್ಥೆ.

ಇದೇ ಉದ್ದೇಶವನ್ನಿಟ್ಟುಕೊಂಡು ವೇದಾಂತ ಗ್ರಂಥಗಳನ್ನು ಜನಸಾಮಾನ್ಯರಿಗೆ ತಲುಪಿಸಲು ರಾಮಕೃಷ್ಣ ಮಠದ ಪ್ರಾಜ್ಞ ಸಂನ್ಯಾಸಿಗಳು ಭಾರತದ ವಿವಿಧ ಭಾಷೆಗಳಿಗೆ ಅನುವಾದ ಮಾಡಿದ್ದಾರೆ. ಅವುಗಳನ್ನು ಮಠವು ಪ್ರಕಟಿಸುತ್ತಾ ವಾಗ್ದೇವಿಯ ಸೇವೆ ಸಲ್ಲಿಸುತ್ತಾ ಬಂದಿದೆ. ಜನವರಿ ೨೦೧೬ರಲ್ಲಿ ಪ್ರಕಟವಾದ 'ಸಾಧನೆಗಾಗಿ ಸಹಾಯಕ ಗ್ರಂಥಗಳು' ಎಂಬ 'ವಿವೇಕಪ್ರಭ'ದ ವಿಶೇಷ ಸಂಚಿಕೆಯಲ್ಲಿ ಆಧ್ಯಾತ್ಮಿಕ ಸಾಧನೆಗೆ ಸಹಾಯಕ ಗ್ರಂಥಗಳ ತತ್ತ್ವದ ಬಗ್ಗೆ ವಿವರಿಸಲಾಗಿತ್ತು. ಈ ಲೇಖನದಲ್ಲಿ ರಾಮಕೃಷ್ಣ ಮಹಾಸಂಘದಿಂದ ಕನ್ನಡದಲ್ಲಿ ಪ್ರಕಾಶಿತವಾದ ವೇದಾಂತ ಗ್ರಂಥಗಳ ವೈಶಿಷ್ಟ್ಯದ ಮೇಲ್ನೋಟ ನೀಡಲು ಪ್ರಯತ್ನಿಸಲಾಗಿದೆ. ಇದರಲ್ಲಿ ವಿಶೇಷವಾಗಿ ಮಹಾಸಂಘದ ಶಾಖಾ ಕೇಂದ್ರಗಳು ಕನ್ನಡದಲ್ಲಿ ಪ್ರಕಟಿಸಿದ ಹಲವಾರು ಗ್ರಂಥಗಳಲ್ಲಿ ಮುಖ್ಯವಾದವುಗಳನ್ನು ಆರಿಸಿಕೊಳ್ಳಲಾಗಿದೆ.

೧. ಉಪನಿಷತ್ತುಗಳು

ವೇದಾಂತ ದರ್ಶನದ ಆಧಾರಸ್ತಂಭಗಳೇ ಉಪನಿಷತ್ತುಗಳು. ನಮ್ಮ ಸನಾತನ ಋಷಿಗಳು ಸಾಕ್ಷಾತ್ಕರಿಸಿಕೊಂಡಂತಹ ಸತ್ಯಗಳ ಮೂಲಕ ಜೀವಾತ್ಮ, ಪರಮಾತ್ಮ ಮತ್ತು ಸೃಷ್ಟಿಯಾದ ಪ್ರಪಂಚ (ಬ್ರಹ್ಮಾಂಡ) ಇವುಗಳ ವಾಸ್ತವತೆ, ಅದನ್ನು ಅರಿಯುವ ಬಗೆ ಇತ್ಯಾದಿ ಜ್ಞಾನವನ್ನು ಇವುಗಳಿಂದ ಪಡೆಯಬಹುದು. ನಾಲ್ಕು ವೇದಗಳಿಗೆ ಸಂಬಂಧಪಟ್ಟಂತೆ ಮುಖ್ಯವಾಗಿ ಈ ಕೆಳಕಂಡ ಹನ್ನೊಂದು ಉಪನಿಷತ್ತುಗಳನ್ನು ಎಲ್ಲಾ ವೇದ ಪಾರಂಗತ ವಿದ್ವಾಂಸರು ಅನುಮೋದಿಸಿದ್ದಾರೆ. ಅವು:

೧) ಈಶಾವಾಸ್ಯೋಪನಿಷತ್ತು

೨) ಕೇನೋಪನಿಷತ್ತು

೩) ಕಠೋಪನಿಷತ್ತು

೪) ಪ್ರಶ್ನೋಪನಿಷತ್ತು

೫) ಮುಂಡಕೋಪನಿಷತ್ತು

೬) ಮಾಂಡೂಕ್ಯೋಪನಿಷತ್ತು

೭) ತೈತ್ತಿರೀಯೋಪನಿಷತ್ತು

೮) ಐತರೇಯೋಪನಿಷತ್ತು

೯) ಛಾಂದೋಗ್ಯೋಪನಿಷತ್ತು

೧೦) ಬೃಹದಾರಣ್ಯಕೋಪನಿಷತ್ತು

೧೧) ಶ್ವೇತಾಶ್ವತರೋಪನಿಷತ್ತು

ರಾಮಕೃಷ್ಣ ಮಠದ ಹಿರಿಯ ಸಂನ್ಯಾಸಿಗಳು ಉಪನಿಷತ್ತುಗಳನ್ನು ಕನ್ನಡಕ್ಕೆ ಅನುವಾದ ಮಾಡಿ ಕೊಟ್ಟಿರುವುದಲ್ಲದೆ, ಸರಳವಾಗಿ ಹಾಗೂ ಮನದಟ್ಟಾಗುವಂತೆ ವ್ಯಾಖ್ಯಾನ ಬರೆದು ಕನ್ನಡ-ಸಂಸ್ಕೃತ- ವಾಙ್ಮಯ ಎರಡನ್ನೂ ಸಮೃದ್ಧಗೊಳಿಸಿದ್ದಾರೆ.

೧.೧ ಸ್ವಾಮಿ ಆದಿದೇವಾನಂದರು ಅನುವಾದಿಸಿದ ಉಪನಿಷದ್ ಗ್ರಂಥಮಾಲೆ

ಮಂಗಳೂರಿನ ರಾಮಕೃಷ್ಣ ಮಠದ ಅಧ್ಯಕ್ಷರೂ, ರಾಮಕೃಷ್ಣ ಮಠ ಮತ್ತು ಮಿಷನ್ನಿನ ಟ್ರಸ್ಟಿಗಳೂ ಆಗಿದ್ದ ಪೂಜ್ಯ ಸ್ವಾಮಿ ಆದಿದೇವಾನಂದರು ಮುಖ್ಯ ಉಪನಿಷತ್ತುಗಳನ್ನು ಅನುವಾದಿಸಿ ಗ್ರಂಥಮಾಲೆಯನ್ನು ಪ್ರಕಟಿಸಿದ್ದರು. ಇವನ್ನು ಮೊದಲು ಮಂಗಳೂರಿನ ರಾಮಕೃಷ್ಣ ಮಠದಿಂದ ಪ್ರಕಾಶಿಸಲಾಗಿತ್ತು. ಈಗ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಿಂದ ಪ್ರಕಾಶಿಸಲಾಗುತ್ತಿದೆ.

ಈ ಉಪನಿಷತ್ತುಗಳ ಅನುವಾದಗಳ ಗ್ರಂಥಮಾಲೆಯಲ್ಲಿ ಕೆಲವು ಸಾಮಾನ್ಯ ಅಂಶಗಳಿವೆ. ಅವು ಹೀಗಿವೆ:

i) ಅನುವಾದವು ಅದ್ವೈತ ಮತವನ್ನು ಭಾರತಾದ್ಯಂತ ಪ್ರಚಾರ ಮಾಡಿದ ಭಗವತ್ಪಾದ ಆದಿಶಂಕರಾಚಾರ್ಯರ ಉಪನಿಷದ್ಭಾಷ್ಯವನ್ನು ಅವಲಂಬಿಸಿದೆ.

ii) ಉಪನಿಷತ್ತಿನ ಮಂತ್ರಗಳಲ್ಲಿ ವಾಕ್ಯಗಳು ಕ್ರಿಯಾಪದದಲ್ಲಿ ಕೊನೆಗೊಳ್ಳಬೇಕೆಂದಿಲ್ಲ.[೧] ಪ್ರತಿಯೊಂದು ಪುಸ್ತಿಕೆಯಲ್ಲೂ ಅನುವಾದದೊಡನೆ ಅನ್ವಯ[೨], ಪ್ರತಿಪದದ ಅರ್ಥ, ತಾತ್ಪರ್ಯ ಮತ್ತು ಆವಶ್ಯಕತೆ ಇದ್ದಲ್ಲಿ ಟಿಪ್ಪಣಿಗಳನ್ನು ನೀಡಲಾಗಿದೆ.

iii) ಪ್ರತಿಯೊಂದು ಪುಸ್ತಕದ ಕೊನೆಯಲ್ಲಿ ಉಪನಿಷತ್ತಿನಲ್ಲಿರುವ ಮಂತ್ರಗಳ ಅಕಾರಾದಿ ಅನುಕ್ರಮಣಿಕೆಯನ್ನು ನೀಡಲಾಗಿದೆ.

ಪ್ರತಿಯೊಂದು ಮಂತ್ರಕ್ಕೂ ಸರಳವಾದ ವ್ಯಾಖ್ಯಾನವನ್ನು ನೀಡಲಾಗಿರುವುದರಿಂದ ಉಪನಿಷತ್ತುಗಳನ್ನು ಮೊದಲನೆಯ ಬಾರಿಗೆ ಅಧ್ಯಯನ ಮಾಡುವವರಿಗೆ ಈ ಗ್ರಂಥಮಾಲೆ ಒಂದು

---

೧. ಸಂಸ್ಕೃತ ವಾಙ್ಮಯದಲ್ಲಿ ವಾಕ್ಯವು ಕ್ರಿಯಾಪದದಲ್ಲೇ ಕೊನೆಗೊಳ್ಳಬೇಕೆಂಬ ನಿಯಮವಿಲ್ಲ.

೨. ಅರ್ಥ ಮಾಡಿಕೊಳ್ಳಲು ಸುಲಭವಾಗುವಂತೆ ಪದಗಳ ಕ್ರಮ ಬದಲು ಮಾಡಿ ಜೋಡಿಸುವ ಪ್ರಕ್ರಿಯೆಗೆ ಅನ್ವಯ ಎಂದು ಹೆಸರು.

ವರದಾನವಾಗಿದೆ. ಇಷ್ಟೇ ಅಲ್ಲದೆ ಪ್ರತಿಯೊಂದು ಪುಸ್ತಕವೂ ವೈಶಿಷ್ಟ್ಯಪೂರ್ಣವಾಗಿದ್ದು, ವಿವರವನ್ನು ಕೆಳಗೆ ನೀಡಲಾಗಿದೆ.

೧) ಈಶಾವಾಸ್ಯ ಉಪನಿಷತ್ತು : ಆದಿದೇವಾನಂದರು ಈ ಉಪನಿಷತ್ತನ್ನು ಪರಿಚಯಿಸುವಾಗ ಇದರ ತಾತ್ವಿಕ ವಿಮರ್ಶೆ ನೀಡಿದ್ದಾರೆ. 'ಯಾವ ಪ್ರಶ್ನೆಗಳು ನಮ್ಮ ಋಷಿಗಳನ್ನು ಕಾಡುತ್ತಿದ್ದವು?' ಎಂದು ವಿಚಾರಮಾಡಿ ಉಪನಿಷತ್ತುಗಳಲ್ಲೇ ಕಂಡುಬರುವ ಪ್ರಶ್ನೆಗಳನ್ನು ಇಲ್ಲಿ ನೀಡಿದ್ದಾರೆ. ಪಾಲ್ ಡಾಯ್‌ಸನ್ನರ ಪ್ರಕಾರ ಈ ಉಪನಿಷತ್ತಿನಿಂದ ಯಾವ ಯಾವ ಪಾಶ್ಚಾತ್ಯ ದಾರ್ಶನಿಕರು ಹೇಗೆ ಪ್ರಭಾವಿತರಾಗಿದ್ದಾರೆ ಎಂದು ತಿಳಿಸಿಕೊಟ್ಟಿದ್ದಾರೆ. ವಿಶೇಷವಾಗಿ, ಈ ಉಪನಿಷತ್ತಿನ ಪರಿಚಯದಲ್ಲಿ ಉಪನಿಷತ್ ಶಬ್ದದ ಮೂಲ ವ್ಯುತ್ಪತ್ತಿ[೩] ಮತ್ತು ಉಪನಿಷತ್ತುಗಳ ಸಂಖ್ಯೆ ಇತ್ಯಾದಿಗಳನ್ನು ತಿಳಿಸಿದ್ದಾರೆ.

ಈಶಾವಾಸ್ಯ ಉಪನಿಷತ್ತು ಶುಕ್ಲಯಜುರ್ವೇದದ ವಾಜಸನೇಯಸಂಹಿತಾ ಭಾಗದಲ್ಲಿರುವುದರಿಂದ ಸಂಹಿತೆಯ ಪಾಠಕ್ಕೂ ಉಪನಿಷತ್ ಪಾಠಕ್ಕೂ ಭೇದ ಉಂಟು. ಈ ಭೇದವನ್ನು ಸಂಕ್ಷೇಪವಾಗಿ ತಿಳಿಸಲಾಗಿದೆ. ಅಂತೆಯೇ ಅದ್ವೈತ ಮತಾನುಸಾರ ಬರೆದಿರುವ ಶಂಕರಾಚಾರ್ಯರ ಭಾಷ್ಯ ಮತ್ತು ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಮತವನ್ನು ಅನುಸರಿಸಿ ಶ್ರೀವೇದಾಂತ ದೇಶಿಕರು ಬರೆದಿರುವ ಈಶೋಪನಿಷತ್ ಭಾಷ್ಯ - ಇವರಿಬ್ಬರ ಮತಗಳ ಸಂಬಂಧವಾಗಿ ವಿವರಿಸಿದ್ದಾರೆ.

ಪುಸ್ತಕದ ಮೊದಲನೆಯ ಭಾಗದಲ್ಲಿ ಶಾಂಕರಭಾಷ್ಯದ ಅನುಸಾರ ಅನ್ವಯ, ಪದಶಃ ಅರ್ಥ, ತಾತ್ಪರ್ಯ ಮತ್ತು ಟಿಪ್ಪಣಿಗಳನ್ನು ಕೊಟ್ಟು ಎರಡನೆಯ ಭಾಗದಲ್ಲಿ ವೇದಾಂತದೇಶಿಕರ ವ್ಯಾಖ್ಯಾನಾನುಸಾರವಾಗಿ ತಾತ್ಪರ್ಯ, ಟಿಪ್ಪಣಿಗಳನ್ನು ಕೊಡಲಾಗಿದೆ.

೨) ಕೇನೋಪನಿಷತ್ತು : ಈ ಕಿರುಗ್ರಂಥವನ್ನು ಪ್ರಸ್ತಾಪಿಸುವಲ್ಲಿ ಅನುವಾದಕರು ಕೇನೋಪನಿಷತ್ತಿಗೆ ಆ ಹೆಸರು ಹೇಗೆ ಬಂತು? ಎಷ್ಟು ಅಧ್ಯಾಯಗಳಿವೆ? ಇದರ ಬಗ್ಗೆ ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞರ ಅಭಿಪ್ರಾಯ ಏನಿದೆ? ಇದರ ಸಂಕ್ಷೇಪ ಇತಿಹಾಸ ಏನು? ಅಷ್ಟೇ ಅಲ್ಲದೆ ಶಂಕರಾಚಾರ್ಯರು ಇದಕ್ಕೆ ಬರೆದಿರುವ ಪದಭಾಷ್ಯ ಮತ್ತು ವಾಕ್ಯಭಾಷ್ಯ ಎಂಬ ಎರಡು ಭಾಷ್ಯಗಳ ಬಗ್ಗೆ ತಿಳಿಸಿದ್ದಾರೆ. ಇದರ ಜೊತೆಗೆ ಶ್ರೀರಂಗರಾಮಾನುಜರ ಪರಿಚಯ ನೀಡಿ ತದನಂತರ ಉಪನಿಷತ್ತಿನ ಅಧ್ಯಾಯಗಳನ್ನು ವಿವರಿಸಿ ಕಡೆಯಲ್ಲಿ ಉಪನಿಷತ್ತಿನ ಸಾರಾಂಶವನ್ನು ತಿಳಿಸಿದ್ದಾರೆ.

ಈ ಪುಸ್ತಕದ ಅಗ್ರಭಾಗದಲ್ಲಿ ಮೂಲ ಮಂತ್ರಗಳೊಂದಿಗೆ ಅನ್ವಯ ಮತ್ತು ಪ್ರತಿಪದದ ಅರ್ಥಗಳನ್ನು ಶಂಕರಾಚಾರ್ಯರ ಪದಭಾಷ್ಯದ ಅನುಸಾರವಾಗಿ ಕೊಡಲಾಗಿದೆ ಮತ್ತು ಎರಡನೇ ಭಾಗದಲ್ಲಿ ವಿಶಿಷ್ಟಾದ್ವೈತ ಮತಾನುಸಾರವಾಗಿ ಶ್ರೀರಂಗರಾಮಾನುಜ ಯತಿಗಳ ವ್ಯಾಖ್ಯಾನವನ್ನು ಅನುಸರಿಸಿ ತಾತ್ಪರ್ಯ ಮತ್ತು ಟಿಪ್ಪಣಿಗಳನ್ನು ಕೊಟ್ಟಿದ್ದಾರೆ.

೩) ಕಠೋಪನಿಷತ್ತು : ಉಪನಿಷತ್ತುಗಳಲ್ಲಿ ಅತ್ಯಂತ ಪ್ರಸಿದ್ಧವೂ ಆದರಣೀಯವೂ ಆಗಿರುವ ಕಠೋಪನಿಷತ್ತನ್ನು ಮ್ಯಾಕ್ಸ್ ಮುಲ್ಲರ್ ಭಾರತೀಯ ಅಧ್ಯಾತ್ಮಿಕತೆಯ ಪರಮಾದರ್ಶವಾಗಿ ಉಲ್ಲೇಖಿಸಿದ್ದಾರೆ. ಆದಿದೇವಾನಂದರು ಪುಸ್ತಕದ ಪೀಠಿಕೆಯಲ್ಲಿ ನಚಿಕೇತನ ಕಥೆಯು ಋಗ್ವೇದದಲ್ಲೇ ಮೊದಲು ಕಂಡು ಬರುವುದೆಂದೂ, ಕಠೋಪನಿಷತ್ತು ಕೃಷ್ಣ ಯಜುರ್ವೇದದ ಕಾಠಕ ಶಾಖೆಗೆ ಸೇರಿರುವುದೆಂದೂ, ಇದರ ಸಂಬಂಧವಾಗಿ ಬೇರೆ ಬೇರೆ ವಿದ್ವಾಂಸರ ಅಭಿಪ್ರಾಯಗಳನ್ನೂ ತಿಳಿಸಿಕೊಟ್ಟಿದ್ದಾರೆ. ಜೊತೆಗೆ ಉಪನಿಷತ್ತಿನ ಪ್ರತಿಯೊಂದು ಅಧ್ಯಾಯದ ಮೇಲ್ವಿವರಣೆ ನೀಡಿ ಉಪನಿಷತ್ತಿನ ತಾರ್ಕಿಕ ಅನುಕ್ರಮಣಿಯ ಆಕಾರದ ಬಗ್ಗೆ ಸಂಕ್ಷೇಪವಾಗಿ ವಿವರಿಸಿದ್ದಾರೆ.

೪) ಪ್ರಶ್ನೋಪನಿಷತ್ತು: ಪ್ರಶ್ನೋತ್ತರ ಸಂವಾದ ರೂಪದಲ್ಲಿರುವ ಈ ಉಪನಿಷತ್ತಿನಲ್ಲಿ ಆರು ಅಧ್ಯಾಯಗಳಲ್ಲಿ ಆರು ಪ್ರಶ್ನೆಗಳಿವೆ. ಅನುವಾದಕರು ಈ ಕಿರುಗ್ರಂಥದ ಪೀಠಿಕೆಯಲ್ಲಿ ಶ್ರೀ ಆದಿಶಂಕರರು ಭಾಷ್ಯದ ಅವತರಣಿಕೆಯಲ್ಲಿ ಮಂಡಿಸಿರುವ ವಿಷಯವನ್ನು ತಿಳಿಸುತ್ತಾ ಪ್ರತಿಯೊಂದು ಅಧ್ಯಾಯದ ಸಾರಾಂಶವನ್ನು ನೀಡಿದ್ದಾರೆ.

೫) ಮುಂಡಕೋಪನಿಷತ್ತು : ಅಥರ್ವವೇದಕ್ಕೆ ಸೇರಿದ ಮುಂಡಕೋಪನಿಷತ್ತಿನ ಮುನ್ನುಡಿಯಲ್ಲಿ ಉಪನಿಷತ್ತಿಗೆ ಯಾಕೆ ಈ ಹೆಸರು ಬಂದಿದೆ ಎಂದು ವಿಶ್ಲೇಷಿಸಿ, ಉಪನಿಷತ್ತಿನ ವಿಷಯವನ್ನು ಸರಳವಾಗಿ ನಾಲ್ಕು ಮುಖ್ಯಾಂಶಗಳಲ್ಲಿ ವಿವರಿಸಿ, ಉಪನಿಷತ್ತಿನ ಸಂದೇಶವನ್ನು ತಿಳಿಸಿಕೊಟ್ಟಿದ್ದಾರೆ ಸ್ವಾಮಿ ಆದಿದೇವಾನಂದರು. ಈ ಕಿರುಹೊತ್ತಿಗೆಯ ಮೊದಲ ಭಾಗದಲ್ಲಿ ಶಾಂಕರ ಭಾಷ್ಯವನ್ನು ಆಧರಿಸಿ ಅನುವಾದ ನೀಡಲಾಗಿದ್ದು, ಪುಸ್ತಕದ ನಂತರದ ಭಾಗದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರೊ. ಎಸ್.ಎಸ್.ರಾಘವಾಚಾರ್ಯರು ಶ್ರೀರಂಗರಾಮಾನುಜರ ಭಾಷ್ಯವನ್ನು ಅವಲಂಬಿಸಿ ಮಾಡಿದ ನೇರ ಅನುವಾದ ಪ್ರಕಟಿಸಲಾಗಿದೆ.

೬) ಮಾಂಡೂಕ್ಯೋಪನಿಷತ್ತು ಮತ್ತು ಗೌಡಪಾದ ಕಾರಿಕಾ : ಮುಮುಕ್ಷುಗಳಿಗೆ ಮಾಂಡೂಕ್ಯೋಪನಿಷತ್ತೊಂದೇ ಮುಕ್ತಿಯನ್ನು ದೊರಕಿಸಿಕೊಡುತ್ತದೆ ಎಂದು ಮುಕ್ತಿಕೋಪನಿಷತ್ತು ಘೋಷಿಸುತ್ತದೆ. ಶ್ರೀಶಂಕರಾಚಾರ್ಯರು ವೇದಾಂತಾರ್ಥದ ಸಾರ ಸಂಗ್ರಹ[೪] ಎಂದು ಕೊಂಡಾಡಿರುವ ಈ ಉಪನಿಷತ್ತಿನಲ್ಲಿ ತತ್ತ್ವವನ್ನು ಅರಿತುಕೊಳ್ಳಲು ಪ್ರಯೋಗಿಸಿರುವ ರೀತಿ ಅಸಾಧಾರಣವೆಂದು ಅನುವಾದಕರು ತಿಳಿಸಿದ್ದಾರೆ. ಸಾಮಾನ್ಯವಾಗಿ ಪ್ರತಿಯೊಂದು ಜೀವಿಯ ಅನುಭವಕ್ಕೆ ಬರುವ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು

೩. ಸಂಸ್ಕೃತದಲ್ಲಿ ಪ್ರತಿಯೊಂದು ಶಬ್ದವೂ ಕ್ರಿಯಾಪದದ ಮೂಲವಾದ ಧಾತುವಿನಿಂದ ಯಾವ ಪ್ರಕ್ರಿಯೆಗಳ ಮೂಲಕ ಹೇಗೆ ಉತ್ಪತ್ತಿಯಾಗುತ್ತದೆ ಎಂದು ತಿಳಿಸುವುದಕ್ಕೆ ವ್ಯುತ್ಪತ್ತಿ ಎಂದು ಕರೆಯುತ್ತಾರೆ.

೪. ವೇದಾಂತಾರ್ಥಸಾರಸಂಗ್ರಹಭೂತಮ್

ಅವಸ್ಥೆಗಳ ವಿಶ್ಲೇಷಣವೇ ಈ ಉಪನಿಷತ್ತಿನ ವಿಶಿಷ್ಟ ರೀತಿ ಆಗಿದೆ. ಈ ಅವಸ್ಥಾತ್ರಯದ ವಿಚಾರದ ಮೂಲಕ ಮೂರು ಅವಸ್ಥೆಯನ್ನು ಮೀರಿದ ಅವಕ್ಕೆ ಆಧಾರವಾದ ತುರೀಯಾವಸ್ಥೆಯನ್ನು ಪ್ರತಿಪಾದಿಸಲಾಗಿದೆ.

ಈ ಉಪನಿಷತ್ತು ಅತ್ಯಂತ ಸಂಗ್ರಹ ರೂಪದಲ್ಲಿದ್ದು ಕೇವಲ ೧೨ ಮಂತ್ರಗಳನ್ನು ಒಳಗೊಂಡಿರುವುದರಿಂದ ಇದರ ಅರ್ಥವನ್ನು ತಿಳಿದುಕೊಳ್ಳುವುದು ಸುಲಭ ಸಾಧ್ಯವಲ್ಲ. ಶ್ರೀಆದಿಶಂಕರಾಚಾರ್ಯರ ಪರಮಗುರುಗಳಾದ ಗೌಡಪಾದಾಚಾರ್ಯರು ಉಪನಿಷತ್ತಿನ ಮಥಿತಾರ್ಥವನ್ನು ವ್ಯಕ್ತಪಡಿಸಲು ತಮ್ಮ ಸುಪ್ರಸಿದ್ಧ ಕಾರಿಕೆಯನ್ನು ಬರೆದಿದ್ದಾರೆ. ಶ್ರೀಶಂಕರಭಗವತ್ಪಾದರು ಉಪನಿಷತ್ತಿನ ಮೇಲೂ ಕಾರಿಕೆಗಳ ಮೇಲೂ ಭಾಷ್ಯವನ್ನು ಬರೆಯಲು ಕಾರಣ ತಾತ್ಪರ್ಯವನ್ನು ಮತ್ತೂ ಸ್ಪಷ್ಟ ಪಡಿಸುವ ಸಲುವಾಗಿ ಎಂದು ಅನುವಾದಕರು ತಿಳಿಸಿಕೊಟ್ಟಿದ್ದಾರೆ. ಸ್ವಾಮಿ ಆದಿದೇವಾನಂದರು ಶಾಂಕರಭಾಷ್ಯವನ್ನು ಅನುಸರಿಸಿ ಅನುವಾದ ಮಾಡಿದ್ದಲ್ಲದೆ ಗೌಡಪಾದರ ಕಾರಿಕೆಗಳಿಗೆ ಸರಳ ಅರ್ಥವನ್ನು ನೀಡಿದ್ದಾರೆ. ಇದಲ್ಲದೆ ಪೀಠಿಕೆಯಲ್ಲಿ ಗೌಡಪಾದರ ಪರಿಚಯ ಮತ್ತು ಅವರ ಕಾರಿಕೆಯ ಪರಿಚಯ, ಅವಸ್ಥಾತ್ರಯ ವಿಚಾರ, ಕಾರಿಕೆಯಲ್ಲಿರುವ ಅದ್ವೈತಪ್ರಕರಣ, ಅಜಾತಿವಾದ – ಇವುಗಳನ್ನು ಸಂಕ್ಷೇಪವಾಗಿ ವರ್ಣಿಸಲಾಗಿದೆ. ತದನಂತರ ಪ್ರಣವೋಪಾಸನೆ, ವೈತಥ್ಯ ಮತ್ತು ಅದ್ವೈತ, ಅಸ್ಪರ್ಶಯೋಗ, ಮೋಕ್ಷ ಮತ್ತು ಮುಕ್ತಿ – ಇವುಗಳ ಬಗ್ಗೆ ವಿಶ್ಲೇಷಿಸಲಾಗಿದೆ.

೭) ತೈತ್ತಿರೀಯೋಪನಿಷತ್ತು : ಸ್ವಾಮಿ ಆದಿದೇವಾನಂದರು ಮುನ್ನುಡಿಯಲ್ಲಿ ಯಜುರ್ವೇದದ ಉದ್ದೇಶ, ಶುಕ್ಲ ಮತ್ತು ಕೃಷ್ಣ ಯಜುರ್ವೇದದ ಹಿನ್ನೆಲೆಯನ್ನೂ ವಿವರಿಸಿ, ತೈತ್ತಿರೀಯೋಪನಿಷತ್ತಿನ ಮೂರು ವಲ್ಲಿಗಳ ಸಾರಾಂಶವನ್ನು ತಿಳಿಸಿಕೊಟ್ಟಿದ್ದಾರೆ. ಉಪನಿಷತ್ತಿನಲ್ಲಿ ಪ್ರತಿಪಾದಿಸಲಾದ ಆನಂದಮಯನು ಯಾರು? ಎಂಬ ವಿಚಾರವನ್ನು ವಿಶ್ಲೇಷಿಸಿದ್ದಾರೆ.

೮) ಐತರೇಯೋಪನಿಷತ್ತು : ಅನುವಾದಕರು ಋಗ್ವೇದಕ್ಕೆ ಸೇರಿದ ಈ ಉಪನಿಷತ್ತಿನ ಅಧ್ಯಾಯಗಳ ಸಂಕ್ಷೇಪವಾದ ವಿಂಗಡಣೆಯನ್ನು ಕೊಟ್ಟು, ತದನಂತರ ಈ ಉಪನಿಷತ್ತಿನ ಋಷಿಯ ಬಗ್ಗೆ ತಿಳಿಸಿಕೊಟ್ಟು, ಮೊದಲನೇ ಅಧ್ಯಾಯದ ವಾಚ್ಯಾರ್ಥವನ್ನು ಶಂಕರಾಚಾರ್ಯರ ಭಾಷ್ಯದಿಂದಲೇ ಉದ್ಧರಿಸಿದ್ದಾರೆ ಮತ್ತು ಪ್ರತಿಯೊಂದು ಅಧ್ಯಾಯದ ಸಾರಾಂಶವನ್ನು ಪೀಠಿಕೆಯಲ್ಲಿ ನೀಡಿದ್ದಾರೆ.

೯) ಛಾಂದೋಗ್ಯೋಪನಿಷತ್ತು : ಇದು ಸಾಮವೇದಕ್ಕೆ ಸೇರಿದ್ದು. ಇದರಲ್ಲಿ ವಿದ್ಯೆ ಅಥವಾ ಉಪಾಸನೆಗಳು ಬಹಳಷ್ಟು ಕಂಡುಬರುತ್ತವೆ. ಬ್ರಹ್ಮಸೂತ್ರದ ಭಾಷ್ಯದಲ್ಲಿ ಈ ಉಪನಿಷತ್ತಿನಿಂದ ಆರಿಸಿಕೊಂಡಿರುವ ವಿಷಯವಾಕ್ಯಗಳ ಸಂಖ್ಯೆಯನ್ನು ನೋಡಿದರೆ ಈ ಉಪನಿಷತ್ತಿಗೆ ವಿಶೇಷವಾದ ಪ್ರಾಧಾನ್ಯವಿದೆ ಎಂದು ಸ್ಪಷ್ಟವಾಗುತ್ತದೆ. ಇದರಲ್ಲಿ ಬಹುಮುಖ್ಯವಾದ ದಹರವಿದ್ಯೆ ಮತ್ತು ಶಾಂಡಿಲ್ಯವಿದ್ಯೆ ಮೊದಲಾದ ಉಪಾಸನೆಗಳು ಒಳಗೊಂಡಿವೆ. ತಮ್ಮ ಪ್ರಾಸ್ತಾವಿಕ ಬರಹದಲ್ಲಿ ಈ ವಿಚಾರಗಳನ್ನೆಲ್ಲಾ ತಿಳಿಸಿಕೊಟ್ಟು, ಉಪನಿಷತ್ತಿನ ಮೇಲೆ ಬರೆದ ಭಾಷ್ಯದ ಇತಿಹಾಸವನ್ನು ಸಂಕ್ಷೇಪವಾಗಿ ಹೇಳಿ, ಪ್ರತಿಯೊಂದು ಅಧ್ಯಾಯದ ಸಂಕ್ಷಿಪ್ತವಾದ ಸಾರಾಂಶವನ್ನು ನೀಡಿದ್ದಾರೆ ಸ್ವಾಮಿ ಆದಿದೇವಾನಂದರು.

೯) ಬೃಹದಾರಣ್ಯಕೋಪನಿಷತ್ತು : ಹೆಸರಿಗೆ ತಕ್ಕಂತೆ ಬೃಹತ್-ಆರಣ್ಯಕ-ಉಪನಿಷತ್ ವಿಷಯ ಸಮೃದ್ಧಿಯಿಂದ ದೊಡ್ಡದಾಗಿದೆ. ಬೃಹದಾರಣ್ಯಕೋಪನಿಷತ್ತು ಶುಕ್ಲಯಜುರ್ವೇದದ ಶತಪಥ ಬ್ರಾಹ್ಮಣಕ್ಕೆ ಸೇರಿದೆ. ಶತಪಥಬ್ರಾಹ್ಮಣವನ್ನು ಕಾಣ್ವ ಮತ್ತು ಮಾಧ್ಯಂದಿನ ಎಂಬ ಎರಡು ಶಾಖೆಗಳಾಗಿ ವಿಂಗಡಿಸಲಾಗಿದೆ. ಶ್ರೀ ಶಂಕರಾಚಾರ್ಯರು ಕಾಣ್ವಶಾಖೆಯನ್ನು ಅನುಸರಿಸಿ ಭಾಷ್ಯವನ್ನು ರಚಿಸಿದ್ದರು. ಆದರೆ ಬ್ರಹ್ಮಸೂತ್ರ-ಭಾಷ್ಯಾದಿಗಳಲ್ಲಿ ಮಾಧ್ಯಂದಿನ ಶಾಖೆ ಅನುಸರಿಸಿರುವುದು ಕಂಡುಬರುತ್ತದೆ. ಆದಿದೇವಾನಂದರು ತಮ್ಮ ಪುಸ್ತಕದಲ್ಲಿ ಕಾಣ್ವಪಾಠವನ್ನೇ ಅನುಸರಿಸಿದ್ದಾರೆ. ಈ ಬೃಹತ್ ಹೊತ್ತಿಗೆಯ ವಿಷಯಾನುಕ್ರಮಣಿಕೆಯನ್ನು ಸಂಕ್ಷೇಪವಾಗಿ ಪೀಠಿಕೆಯಲ್ಲಿ ವಿವರಿಸಿದ್ದಾರೆ. ನಂತರ ಪ್ರತಿಯೊಂದು ಅಧ್ಯಾಯಕ್ಕೂ ಅದರಲ್ಲಿರುವ ವಿಷಯಗಳಿಗೂ ಸರಳವಾಗಿ ಸ್ಥೂಲವಾದ ಸಮೀಕ್ಷೆ ನೀಡಿದ್ದಾರೆ. ಈ ಅಧ್ಯಾಯಗಳಲ್ಲಿ ಬರುವ ಮುಖ್ಯಾಂಶಗಳನ್ನು ಎತ್ತಿ ಹಿಡಿದಿದ್ದಾರೆ. ಸಂಸ್ಕೃತವನ್ನು ಅರಿತಿಲ್ಲದವರು, ಶ್ರೀಶಂಕರಾಚಾರ್ಯರ ಭಾಷ್ಯದ ಶೈಲಿಯನ್ನಾಗಲೀ ನ್ಯಾಯಶಾಸ್ತ್ರವನ್ನಾಗಲೀ ಅರಿಯದಿರುವವರು, ಈ ಉಪನಿಷತ್ತನ್ನು ಓದಲು ಕಷ್ಟಸಾಧ್ಯ. ಆದರೂ ಅನುವಾದಕರು ಸರಳವಾದ ಅರ್ಥ ಕೊಟ್ಟು ಸರ್ವಸಾಮಾನ್ಯರಿಗೂ ಮನದಟ್ಟಾಗುವಂತೆ ಬರೆದಿದ್ದಾರೆ.

೧.೨ ಉಪನಿಷತ್ ಭಾವಧಾರೆ

ಪೂಜ್ಯ ಸ್ವಾಮಿ ಸೋಮನಾಥಾನಂದರು 'ಉಪನಿಷತ್ ಭಾವಧಾರೆ' ಎಂಬ ಗ್ರಂಥದಲ್ಲಿ ಎಲ್ಲ ಪ್ರಮುಖ ಉಪನಿಷತ್ತುಗಳನ್ನು ವ್ಯಾಖ್ಯಾನ ರೂಪದಲ್ಲಿ ಸರಳವಾಗಿ ಹೃದಯಂಗಮವಾಗಿ ಅನುವಾದಿಸಿದ್ದಾರೆ. ಈ ಪುಸ್ತಕದಲ್ಲಿ ಕ್ರಮವಾಗಿ ಕಠೋಪನಿಷತ್, ಈಶಾವಾಸ್ಯೋಪನಿಷತ್, ಕೇನೋಪನಿಷತ್, ಪ್ರಶ್ನೋಪನಿಷತ್, ಮುಂಡಕೋಪನಿಷತ್, ಮಾಂಡೂಕ್ಯೋಪನಿಷತ್,



ತೈತ್ತಿರೀಯೋಪನಿಷತ್, ಐತರೇಯೋಪನಿಷತ್, ಶ್ವೇತಾಶ್ವತರೋಪನಿಷತ್ ಮತ್ತು ಮಂತ್ರಗಳ ಅನುಕ್ರಮಣಿಕೆಯನ್ನು ನೀಡಲಾಗಿದೆ. ಉಪನಿಷದ್ ವಿವರಣೆ ಆರಂಭಿಸುವ ಮೊದಲು ಉಪನಿಷದ್ ದರ್ಶನವನ್ನು ಪರಿಚಯಿಸುತ್ತಾ ವೇದಗಳ ಪರಿಚಯ, ಪ್ರಸ್ಥಾನ ತ್ರಯಗಳ ಪರಿಚಯ ನೀಡಿದ್ದಾರೆ. 'ಉಪನಿಷತ್ತುಗಳು ಯಾವುದೇ ವ್ಯಕ್ತಿಯನ್ನು ಎತ್ತಿ ಹಿಡಿಯದೇ ಸಾರ್ವತ್ರಿಕವಾದ ತತ್ತ್ವಗಳನ್ನು ಎತ್ತಿ ಹಿಡಿಯುತ್ತವೆ' ಎಂದು ತಿಳಿಸಿಕೊಟ್ಟು, ಸ್ತ್ರೀಯರಿಗೆ ವೇದಕಾಲದಲ್ಲಿದ್ದಂತಹ ಸ್ಥಾನ, ಉಪನಿಷತ್ತುಗಳ ಬೋಧನೆಯ ವೈಖರಿ, ಉಪನಿಷತ್ತಿನಲ್ಲಿ ಬರುವ ಬ್ರಹ್ಮ, ಜೀವ ಮತ್ತು ಜಗತ್ತು – ಇವುಗಳ ತತ್ತ್ವವಿವೇಚನೆ, ಆಧ್ಯಾತ್ಮಿಕ ಗುರಿಯನ್ನು ಸೇರಲು ಆವಶ್ಯಕವಾದ ಉಪನಿಷತ್ತುಗಳಲ್ಲಿ ಬೋಧಿಸಿರುವ ಸಾಧನೆ, ಉಪನಿಷತ್ತುಗಳಲ್ಲಿ ಭಕ್ತಿ ಮತ್ತು ಉಪನಿಷತ್-ಸಂದೇಶಗಳ ವೈಶಿಷ್ಟ್ಯ – ಇವುಗಳ ಬಗ್ಗೆ ವಿಮರ್ಶಿಸಿದ್ದಾರೆ.

ಈ ಗ್ರಂಥದಲ್ಲಿ ಮಂತ್ರಾರ್ಥ ವಿವರಣೆಯು ಸಂಭಾಷಣೆಯಂತೆ ಅಥವಾ ಸಂವಾದದಂತೆ ಕಂಡುಬರುವುದರಿಂದ ಜನಸಾಮಾನ್ಯರ ಮನಸ್ಸನ್ನು ಸೂರೆಗೊಂಡು ಗ್ರಂಥವು ಉಪನಿಷತ್ತುಗಳ ಅರ್ಥವನ್ನು ಚೆನ್ನಾಗಿ ಮನದಟ್ಟು ಮಾಡಿಕೊಡುತ್ತದೆ. ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಿಂದ ಪ್ರಕಟವಾಗುತ್ತಾ ಬಂದಿರುವ ಈ ಪುಸ್ತಕದ ಪ್ರತಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೊಂಡುಕೊಳ್ಳುತ್ತಿರುವುದರಿಂದಲೇ ಇದರ ಜನಪ್ರಿಯತೆ ಎಂತಹದೆಂಬುದು ತಿಳಿಯುತ್ತದೆ.



೧.೩ ಉಪನಿಷತ್ತುಗಳ ಸಂದೇಶ

ರಾಮಕೃಷ್ಣ ಮಹಾಸಂಘದ ೧೩ನೇ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ರಂಗನಾಥಾನಂದರು ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನ ಕಾರ್ಯದರ್ಶಿಯಾಗಿದ್ದಾಗ ಅಲ್ಲಿ ನೀಡಿದ ಉಪನ್ಯಾಸಗಳ ಮಾಲೆಯನ್ನು ಭಾರತೀಯ ವಿದ್ಯಾಭವನದವರು 'The Message of the Upanishads' ಎಂಬ ಶೀರ್ಷಿಕೆಯಲ್ಲಿ ಪುಸ್ತಕರೂಪದಲ್ಲಿ ಆಂಗ್ಲ ಭಾಷೆಯಲ್ಲಿ ಹೊರತಂದರು. ಇದರ ಕನ್ನಡದ ಅನುವಾದ ವನ್ನು ಖ್ಯಾತ ಸಾಹಿತಿಗಳಾಗಿದ್ದ ಡಾ. ಪ್ರಭುಶಂಕರ ಮಾಡಿಕೊಟ್ಟಿದ್ದಾರೆ. ಇದನ್ನು ಮೈಸೂರು ಶ್ರೀರಾಮಕೃಷ್ಣ ಆಶ್ರಮವು 'ಉಪನಿಷತ್ತುಗಳ ಸಂದೇಶ' ಎಂಬ ಹೆಸರಿನಲ್ಲಿ ಪ್ರಕಟಿಸುತ್ತಿದೆ.

ಈ ಹೊತ್ತಿಗೆಯಲ್ಲಿ ಈಶ, ಕೇನ ಮತ್ತು ಕಠೋಪ ನಿಷತ್ತುಗಳ ಸಾರಾಂಶವನ್ನು ಕಾಣಬಹುದು. ಸ್ವಾಮಿ ರಂಗನಾಥಾನಂದರು ನೀಡುತ್ತಿದ್ದ ಉಪನ್ಯಾಸಗಳನ್ನು ಆಲಿಸಲು ಬಹುಸಂಖ್ಯೆಯಲ್ಲಿ ಬುದ್ಧಿಶಾಲಿ ತರುಣರು ಹಾಗೂ ತರುಣಿಯರು ಉಪಸ್ಥಿತರಿರುತ್ತಿದ್ದರು. ಈ ಪುಸ್ತಕದ ಪ್ರಾಸ್ತಾವಿಕದಲ್ಲಿ ಉಪನಿಷತ್ತುಗಳ ಆಕರ್ಷಣಾ ಶಕ್ತಿ, ಮುಖ್ಯ ಉಪನಿಷತ್ತುಗಳು, ಸತ್ಯಸ್ಯ ಸತ್ಯ, ಪ್ರಕೃತಿಯ ಅಂತ ರಂಗದ ಅನ್ವೇಷಣೆ, ವಿಜ್ಞಾನ ಮತ್ತು ಧರ್ಮ, ಶ್ರುತಿ ಮತ್ತು ಸ್ಮೃತಿ, ಸನಾತನ ಧರ್ಮದ ಅಸಾಧಾರಣತೆ, ಉಪನಿಷತ್ತಿನ ಮತ್ತು ಭಾರತೀಯ ಸಂಸ್ಕೃತಿ, ಉಪನಿಷತ್ತು ಮತ್ತು ಕ್ರೈಸ್ತಧರ್ಮ, ಉಪನಿಷತ್ತು ಮತ್ತು ಇಸ್ಲಾಂ ಇತ್ಯಾದಿ ವಿಚಾರಗಳನ್ನು ವಿಮರ್ಶಿಸಲಾಗಿದೆ. ಉಪನಿಷತ್ತುಗಳನ್ನು ಪ್ರಾರಂಭ ಮಾಡುವ ಮೊದಲು ನಮ್ಮ ಆಧ್ಯಾತ್ಮಿಕ ಪರಂಪರೆಯ ಬಗ್ಗೆ ಗ್ರಂಥಕರ್ತರು ಸಾರವಾಗಿ ಹೇಳಿದ್ದಾರೆ.

ತದನಂತರ ಈಶೋಪನಿಷತ್ತನ್ನು ೫ ವ್ಯಾಖ್ಯಾನಗಳಲ್ಲಿ, ಕೇನೋಪನಿಷತ್ತನ್ನು ೫ ವ್ಯಾಖ್ಯಾನಗಳಲ್ಲಿ ಹಾಗೂ ಕಠೋಪನಿಷತ್ತನ್ನು ೧೮ ವ್ಯಾಖ್ಯಾನ ಸರಣಿಗಳಲ್ಲಿ ವಿವರಿಸಿದ್ದಾರೆ. ಇದಲ್ಲದೇ, ಅನುಬಂಧದಲ್ಲಿ ಮೂರೂ ಉಪನಿಷತ್ತುಗಳ ಮಂತ್ರಪಾಠವನ್ನೂ ಮತ್ತು ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞರಾದ ಜೂಲಿಯನ್ ಹಕ್ಸ್‌ಲೀ ಮತ್ತು ಲೇಖಕರ ನಡುವೆ ನಡೆದ ಪತ್ರವ್ಯವಹಾರವನ್ನು ಕೊಡಲಾಗಿದೆ.

೧.೪ ಈಶಾವಾಸ್ಯೋಪನಿಷತ್ತಿಗೆ ಸ್ವಾಮಿ ಹರ್ಷಾನಂದರು ಬರೆದಿರುವ 'ವಿವೇಕಸುಖವರ್ಧಿನೀ' ವ್ಯಾಖ್ಯಾನ

ಸುದೀರ್ಘಕಾಲ ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಹರ್ಷಾನಂದರು ಈಶಾವಾಸ್ಯ ಉಪನಿಷತ್ತಿಗೆ 'ವಿವೇಕ-ಸುಖ-ವರ್ಧಿನೀ' ಎಂಬ ಸಂಸ್ಕೃತ ವ್ಯಾಖ್ಯಾನ ಬರೆದಿದ್ದಾರೆ. ಅವರೇ ಅದನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಬೆಂಗಳೂರಿನ ರಾಮಕೃಷ್ಣ ಮಠದಿಂದಲೇ ಪ್ರಕಾಶಿಸಿದ್ದಾರೆ. ಸ್ವಾಮಿ ವಿವೇಕಾನಂದರು ನೀಡಿದ 'God in Everything' ಎಂಬ ಈಶಾವಾಸ್ಯ ಉಪನಿಷತ್ತಿನ ಮೇಲ್ನೋಟ ನೀಡುವ ಉಪನ್ಯಾಸವನ್ನು ಆಧಾರವಾಗಿಟ್ಟುಕೊಂಡು ಮತ್ತು ಕರ್ಮಯೋಗ ಪುಸ್ತಕದಲ್ಲಿ ಲಭ್ಯವಿರುವ ಅವರ ಉಪದೇಶಗಳನ್ನು ಅನುಸರಿಸಿ ಸಂಸ್ಕೃತ ವ್ಯಾಖ್ಯೆಯನ್ನು ರಚಿಸಿದ್ದಾರೆ ಸ್ವಾಮಿ ಹರ್ಷಾನಂದರು. ಇದಕ್ಕೆ ಅವರು ರಾಮಕೃಷ್ಣ ಮಹಾಸಂಘದ ೧೨ನೇ ಪರಮಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಭೂತೇಶಾನಂದರ ಉಪಯುಕ್ತ ಸಲಹೆಯನ್ನು ಪಡೆದುಕೊಂಡಿರುತ್ತಾರೆ. ಮೈಸೂರು ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಕೆ ಬಿ. ರಾಮಕೃಷ್ಣರಾಯರು ಇದಕ್ಕೆ ಮುನ್ನುಡಿಯನ್ನು ಬರೆದುಕೊಟ್ಟಿದ್ದಾರೆ.

ಅವರು ಮುನ್ನುಡಿಯಲ್ಲಿ ಅಭಿಪ್ರಾಯ ಪಟ್ಟಿರುವಂತೆ ಭಾರತೀಯ ಪರಂಪರೆಯ ಅನುಸಾರ ಶಾಸ್ತ್ರಕ್ಕೆ ಇರಬೇಕಾದ ಹಲವಾರು ಲಕ್ಷಣಗಳನ್ನು ಈ ಕೃತಿಯು ಒಳಗೊಂಡಿದೆ ಮತ್ತು ಸಾಧಕನಿಗೆ ಮಾರ್ಗದರ್ಶಕವಾಗಿದೆ. ಋಷಿಗಳ ಪದ್ಧತಿಯನ್ನು ಅನು

ಸರಿಸಿ ಮಂಗಳಾಚಾರಣೆ, ಗುರುಪರಂಪರಾ-ವಂದನೆ, ಅನುಬಂಧ ಚತುಷ್ಟಯ, ಪೂರ್ವಪಕ್ಷ-ಸಿದ್ಧಾಂತ, ಆಕ್ಷೇಪ-ಪರಿಹಾರಗಳ ಚೌಕಟ್ಟಿನಲ್ಲಿ ಮುಂದುವರೆದು ವ್ಯಾಖ್ಯಾನಕಾರರು ಸಿದ್ಧಾಂತವನ್ನು ಮಂಡಿಸಿದ್ದಾರೆ.

ವ್ಯಾಖ್ಯಾನದ ವೈಶಿಷ್ಟ್ಯವನ್ನೂ ಸಹ ಮುನ್ನುಡಿಯಲ್ಲಿ ವಿವರವಾಗಿ ತಿಳಿಸಿಕೊಡಲಾಗಿದೆ. ಸ್ವಾಮಿ ವಿವೇಕಾನಂದರ ಶಿಷ್ಯ ಪರಂಪರೆಯ ದಿವ್ಯ ಅನುಭೂತಿಯೊಂದಿಗೆ ತಮ್ಮ ಅನುಭವವನ್ನು ಸೇರಿಸಿ ಈ ವ್ಯಾಖ್ಯಾನ ಹೊರಬಂದಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಇದಲ್ಲದೆ ಮುಮುಕ್ಷುಗಳಿಗೆ ವ್ಯಾಖ್ಯಾನದ ಉಪೋದ್ಘಾತ (ಪೀಠಿಕಾ ಭಾಗ) ಅತ್ಯಂತ ಉಪಯುಕ್ತವಾಗಿದೆ. ಸ್ವಾಮಿ ಹರ್ಷಾನಂದರೇ ಮಾಡಿದ ಕನ್ನಡ ಅನುವಾದವೂ ಅಷ್ಟೇ ಸುಂದರವಾಗಿದೆ, ಅನುಕರಣೀಯವಾಗಿದೆ ಎಂದಿದ್ದಾರೆ.

೧.೫ ಇನ್ನಿತರ ಉಪನಿಷದ್ಗ್ರಂಥಗಳು

ಮೇಲೆ ತಿಳಿಸಿದ ಗ್ರಂಥಗಳಷ್ಟೇ ಅಲ್ಲದೇ ೮ ಉಪನಿಷತ್ತುಗಳುಳ್ಳ ಪಾರಾಯಣಕ್ಕೆ ಅನುಕೂಲವಾದ ಪುಸ್ತಕ, ಸ್ವಾಮಿ ಆದಿದೇವಾನಂದರ ಉಪನಿಷತ್ತುಗಳ ಸಾರಸಂಗ್ರಹ, ಸ್ವಾಮಿ ಸೋಮನಾಥಾನಂದರ 'ಉಪನಿಷತ್ತುಗಳ ವೈಶಿಷ್ಟ್ಯ' ಮತ್ತು ಸ್ವಾಮಿ ಹರ್ಷಾನಂದರ 'ಉಪನಿಷತ್ತುಗಳು - ಒಂದು ಪರಿಚಯ' ಎಂಬ ಲಘು ಪುಸ್ತಿಕೆಗಳು ಮೈಸೂರು ಆಶ್ರಮದಿಂದ ಪ್ರಕಟಗೊಂಡಿವೆ.

೨. ಭಗವದ್ಗೀತೆ

ಪಂಚಮವೇದವೆಂದೇ ಪ್ರಖ್ಯಾತವಾಗಿರುವ ಮಹಾಭಾರತದ ಭೀಷ್ಮ ಪರ್ವದಲ್ಲಿ ಬರುವ ಭಗವದ್ಗೀತೆ ೭೦೦ ಶ್ಲೋಕಗಳನ್ನು ಒಳಗೊಂಡಿದ್ದು ಹಲವು ಶತಮಾನಗಳಿಂದಲೂ ಸನಾತನ ಧರ್ಮದ ಪವಿತ್ರ ಗ್ರಂಥವಾಗಿದೆ. ಗೀತೆಯ ಆಧಾರದ ಮೇಲೆ ನಿಂತ ಸಂಪ್ರದಾಯಕ್ಕೆ ಮಾತ್ರ ಭಾರತದಲ್ಲಿ ಪ್ರಾಶಸ್ತ್ಯ ಎಂದು ತಿಳಿದು ಎಲ್ಲಾ ಆಚಾರ್ಯರು ಇದರ ಮೇಲೆ ಭಾಷ್ಯ ಬರೆದಿರುತ್ತಾರೆ. ಇದು ಎಲ್ಲಾ ಸ್ತರದಲ್ಲಿ ಇರುವಂತಹ ಜನರಿಗೂ ಮಾರ್ಗದರ್ಶಿ ಆಗುವಂತಹ ಗ್ರಂಥ. ಈ ಗ್ರಂಥವು ಪ್ರತಿನಿತ್ಯವೂ ಪಾರಾಯಣ ಮಾಡಲು ಯೋಗ್ಯ. ಇದು ಸನಾತನ ಧರ್ಮದ ಎಲ್ಲಾ ದರ್ಶನಗಳ ಮತಗಳನ್ನೂ ದೃಷ್ಟಿಕೋನವನ್ನೂ ಒಳಗೊಂಡಂತಹ ಗ್ರಂಥ. ಧರ್ಮ ಸಂಕಟದಲ್ಲಿ ಸಿಕ್ಕಿದಾಗ ಅದರಿಂದ ಪಾರು ಮಾಡುವ ಗ್ರಂಥ. ಸುಖ-ದುಃಖಗಳಲ್ಲಿ, ಲಾಭ-ನಷ್ಟಗಳಲ್ಲಿ, ಜಯಾಪಜಯಗಳಲ್ಲಿ ಗುರಿ ಮರೆಯದಂತೆ ನಮ್ಮನ್ನು ನಿತ್ಯ ಸತ್ಯದ ಕಡೆಗೆ ಸೆಳೆದೊಯ್ಯುವ ಧ್ರುವತಾರೆ ಎಂದು ಸ್ವಾಮಿ ಆದಿದೇವಾನಂದರು ಅಭಿಪ್ರಾಯಪಟ್ಟಿದ್ದಾರೆ.

೨.೧ ಭಗವದ್ಗೀತಾ -ಸಟೀಕಾ



ಸ್ವಾಮಿ ಆದಿದೇವಾನಂದರು ಅನುವಾದಿಸಿರುವ ಭಗವದ್ಗೀತೆಯಲ್ಲಿ ಸುವಿವರವಾಗಿ ಮುನ್ನುಡಿಯನ್ನು ಬರೆದ ಸ್ವಾಮಿ ಸೋಮನಾಥಾನಂದರು ಭಗವದ್ಗೀತೆಯಲ್ಲಿ ಕಂಡು ಬರುವ ತತ್ತ್ವಗಳು, ಕೃಷ್ಣನ ಐತಿಹಾಸಿಕತೆ ಮುಂತಾದ ವಿಚಾರಗಳನ್ನು ವಿಮರ್ಶಿಸಿದ್ದಾರೆ. ತದನಂತರ ಪ್ರಾಸ್ತಾವಿಕ ಚಿಂತನೆಯಲ್ಲಿ ಆದಿದೇವಾನಂದರೂ ಭಗವದ್ಗೀತೆಯ ಬಗ್ಗೆ ಒಂದು ಕಿರು ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಅನುವಾದದಲ್ಲಿ ಪ್ರತಿಯೊಂದು ಶ್ಲೋಕಕ್ಕೆ ಅನ್ವಯಸಹಿತ ಪ್ರತಿಪದದ ಅರ್ಥ, ವ್ಯಾಖ್ಯಾನ ಮತ್ತು ಟಿಪ್ಪಣಿಗಳನ್ನು ನೀಡಿದ್ದಾರೆ. ತಾತ್ಪರ್ಯ ಮತ್ತು ಟೀಕೆಗಳಲ್ಲಿ ಶ್ರೀಶಂಕರಾಚಾರ್ಯರ ಭಾಷ್ಯವನ್ನು ಮುಖ್ಯವಾಗಿ ಅನುಸರಿಸಿದ್ದರೂ ಅಲ್ಲಲ್ಲಿ ಶ್ರೀರಾಮಾನುಜಾಚಾರ್ಯರ ಭಾಷ್ಯದ ಪ್ರಕಾರ ಅರ್ಥವನ್ನು ಕೊಟ್ಟಿದ್ದಾರೆ. ಇದಲ್ಲದೆ ಪುಸ್ತಕದ ಕಡೆಯಲ್ಲಿ ಶ್ಲೋಕಗಳ ಅಕಾರಾದಿ ಸೂಚಿಯನ್ನೂ, ವರಾಹ ಪುರಾಣದಲ್ಲಿರುವ ಭಗವದ್ಗೀತಾ ಮಹಾತ್ಮ್ಯೆಯನ್ನೂ ಅರ್ಥಸಹಿತ ಕೊಡಲಾಗಿದೆ.

೨.೨ ಗೀತಾಭಾವಧಾರೆ

ಉಪನಿಷದ್ ಭಾವಧಾರೆಯಂತೆ ಸ್ವಾಮಿ ಸೋಮನಾಥಾನಂದರ ಮತ್ತೊಂದು ಅಮೂಲ್ಯವಾದ ಕೊಡುಗೆ ಎಂದರೆ ಗೀತಾಭಾವಧಾರೆ. ಹಲವಾರು ವರ್ಷಗಳ ಕಾಲ ಸ್ವಾಮಿ ಸೋಮನಾಥಾನಂದರು ಭಗವದ್ಗೀತೆಯನ್ನು ಪ್ರವಚನಗಳ ಮೂಲಕ ವಿವರಿಸುತ್ತಿದ್ದರು. ಅದನ್ನೇ ಭಕ್ತರ ಆಗ್ರಹದ ಮೇರೆಗೆ ಪುಸ್ತಕ ರೂಪಕ್ಕೆ ತರಲಾಯಿತು. ಭಗವದ್ಗೀತೆಯ ಮೇಲೆ ಬಹಳಷ್ಟು ಜನ ಭಾಷ್ಯಗಳನ್ನು ಬರೆದಿರುವರು. ಬಹುಶಃ ಪ್ರಪಂಚದಲ್ಲಿ ಬೇರೆ ಯಾವ ಗ್ರಂಥದ ಮೇಲೂ ಇಷ್ಟೊಂದು ಸಾಹಿತ್ಯ ಬೆಳೆದಿಲ್ಲ ಎಂದು ಕಾಣುತ್ತದೆ. ಇದಕ್ಕೆ ಕಾರಣ, ಗೀತೆಯು ಜನರ ಮೇಲೆ ಬೀರಿರುವ ಪ್ರಭಾವ. ಸ್ವಾಮಿ ಸೋಮನಾಥಾನಂದರೇ ಹೇಳುವಂತೆ ಪ್ರತಿಯೊಬ್ಬರೂ ತಮ್ಮ ಸಂಸ್ಕಾರಕ್ಕೆ ಅನುಗುಣವಾಗಿ ಮತ್ತು ವಿಕಾಸಕ್ಕೆ ತಕ್ಕಂತೆ ಗೀತೆಯನ್ನು ವಿವರಿಸಬಲ್ಲರು. ಪ್ರತಿಯೊಂದು ಭಾಷ್ಯವೂ ಒಂದು ಮತ್ತೊಂದಕ್ಕೆ ವಿರೋಧವಾಗಿಲ್ಲ ಒಂದು ಮತ್ತೊಂದಕ್ಕೆ ಪೋಷಕವಾಗಿದೆ. ಗೀತಾಭಾವಧಾರೆಯ ವಿಶೇಷವೇನೆಂದರೆ ಲೇಖಕರು ಇದನ್ನು ಸಿದ್ಧಾಂತ ಅಥವಾ ದರ್ಶನದ ದೃಷ್ಟಿಯಲ್ಲಿ ಕಾಣದೆ ಅದನ್ನು ಸಾಧಕನ ದೃಷ್ಟಿಯಿಂದ ಕಂಡು, ಸಾಧಕರಿಗೆ ಪೂರ್ಣಸತ್ಯದೆಡೆಗೆ

ಹೋಗುವುದಕ್ಕೆ ಒದಗುವ ಅಡ್ಡಿ-ಆತಂಕಗಳಿಂದ ಪಾರಾಗುವ ಉಪಾಯವನ್ನು ಇದರಲ್ಲಿ ತಿಳಿಸಲು ಪ್ರಯತ್ನಪಟ್ಟಿದ್ದಾರೆ. ಈ ಪುಸ್ತಕದ ಶೈಲಿ ಮಾತನಾಡುವ ಶೈಲಿಯನ್ನು ಹೋಲುತ್ತದೆ. ಭಾಷಣ ಮಾಡುವ ಸಮಯದಲ್ಲಿ ಯಾವ ಯಾವ ಉದಾಹರಣೆ ಕೊಟ್ಟಿದ್ದಾರೋ ಅದನ್ನೇ ಇಲ್ಲಿಯೂ ಬಳಸಿ ಕೊಂಡಿದ್ದಾರೆ. ಭಗವದ್ಗೀತೆಯು ಎಲ್ಲಾ ಸಾಧಕರಿಗೂ ಊರುಗೋಲು ಆಗ ಬಲ್ಲದು, ಕೈದೀವಿಗೆ ಆಗಬಲ್ಲದು ಎಂಬ ಆಶಯದಿಂದ ಈ ಜ್ಞಾನಯಜ್ಞವನ್ನು ಭಗವಂತನಲ್ಲಿ ಸಮರ್ಪಿಸಿದ್ದಾರೆ. ಗೀತೆಯಲ್ಲಿರುವ ೧೮ ಅಧ್ಯಾಯಕ್ಕೆ ತಕ್ಕಂತೆ ಈ ಪುಸ್ತಕದಲ್ಲೂ ೧೮ ಅಧ್ಯಾಯಗಳ ವಿವರಣೆಯನ್ನು ಬೇರೆ ಬೇರೆಯಾಗಿ ವಿಂಗಡಿಸಲಾಗಿದೆ. ಇದರಲ್ಲಿ ಪ್ರತಿಯೊಂದು ಶ್ಲೋಕದ ವಿವರಣೆ ಇದೆ.

೨.೩ ಭಗವದ್ಗೀತೆಯ ವಿಶ್ವಸಂದೇಶ

ಇದು ರಾಮಕೃಷ್ಣ ಮಹಾಸಂಘದ ೧೩ನೇ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ರಂಗನಾಥಾನಂದರು ಹೈದರಾಬಾದ್ ರಾಮಕೃಷ್ಣ ಮಠದಲ್ಲಿ ೧೯೮೮ ರಿಂದ ೧೯೯೦ರವರೆಗೆ ಭಾನುವಾರ ನೀಡಿದ ಉಪನ್ಯಾಸಗಳ ಸರಮಾಲೆಯ ಪ್ರತಿ ಲೇಖನಗಳು. ಮೊದಲು ಸ್ವಾಮಿ ರಂಗನಾಥಾನಂದರ ೯೧ನೇ ಇಳಿ ವಯಸ್ಸಿನಲ್ಲಿ ಆಂಗ್ಲ ಭಾಷೆಯಲ್ಲಿ ಮೂರು ಭಾಗಗಳಲ್ಲಿ ಪ್ರಕಟಿಸಲಾದ ಇದನ್ನು ಕನ್ನಡಕ್ಕೆ ಅನುವಾದಿಸಿದವರು ಡಾ. ಎಚ್. ರಾಮಚಂದ್ರಸ್ವಾಮಿಯವರು. ಮೊದಲ ಭಾಗದಲ್ಲಿ ಪ್ರಸ್ತಾವನೆ ಮತ್ತು ಭಗವದ್ಗೀತೆಯ ಮೊದಲ ನಾಲ್ಕು ಅಧ್ಯಾಯಗಳ ಮೇಲೆ ನೀಡಿದ ಪ್ರವಚನಗಳನ್ನು ಕೊಡಲಾಗಿದೆ. ಎರಡನೇ ಭಾಗದಲ್ಲಿ ೫ರಿಂದ ೧೦ನೆಯ ಅಧ್ಯಾಯಗಳ ಮೇಲೆ ನೀಡಿದ ಪ್ರವಚನಗಳನ್ನು ಕೊಡಲಾಗಿದೆ. ಮೂರನೇ ಭಾಗದಲ್ಲಿ ೧೧ನೇ ಅಧ್ಯಾಯದಿಂದ ೧೮ನೇ ಅಧ್ಯಾಯದವರೆಗೆ ನೀಡಿದ ಪ್ರವಚನಗಳನ್ನು ಕೊಡಲಾಗಿದೆ. ಭಗವದ್ಗೀತೆಯ ಮೇಲೆ ಬರೆಯಲಾದ ಹಲವಾರು ಗ್ರಂಥಗಳಲ್ಲಿ ಇದು ಒಂದು ಎಂದು ತಿಳಿದು ಈ ಗ್ರಂಥವನ್ನು ಸಾಮಾನ್ಯ ಗುಂಪಿಗೆ ಸೇರಿಸುವಂತಿಲ್ಲ. ಇದನ್ನು ಒಮ್ಮೆ ಓದಲು ಕೈಗೆತ್ತಿಕೊಂಡರೆ ಇದರ ವೈಶಿಷ್ಟ್ಯ, ವಿಚಾರಗಳ ಪ್ರಸ್ತುತತೆ, ಶೈಲಿಯ ಸೊಬಗು ಮತ್ತು ಲಾಲಿತ್ಯ ಓದುಗರ ಗಮನವನ್ನು ಸೆಳೆದು ಓದಿಸಿಕೊಂಡು ಹೋಗುತ್ತದೆ. ನಾವು ಇದನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ವಿಶ್ವದ ಹಲವಾರು ಚಿಂತಕರನ್ನು ಸಂಧಿಸುತ್ತೇವೆ, ಮತ್ತು ನೂತನ ವಿಚಾರಧಾರೆಯನ್ನು ಸವಿಯುತ್ತಾ ಆಳವಾದ ಆಧ್ಯಾತ್ಮಿಕ ಚಿಂತನೆಗಳನ್ನು, ಆನುಷ್ಠಾನಿಕ ಸಲಹೆಗಳನ್ನು ಪಡೆಯಬಹುದು.



೨.೪ ಭಗವದ್ಗೀತೆ (ಶ್ರೀಧರ ಸ್ವಾಮಿಗಳ ಸುಬೋಧಿನೀ ಟೀಕಾ ಸಹಿತ)

ಭಗವದ್ಗೀತೆಯ ಮೇಲೆ ಆಚಾರ್ಯತ್ರಯರ ಭಾಷ್ಯಗಳಲ್ಲದೆ ಬಹಳಷ್ಟು ಪ್ರಾಜ್ಞ ಆಚಾರ್ಯರು ಟೀಕೆ ಟಿಪ್ಪಣಿಗಳನ್ನು ಬರೆದಿದ್ದಾರೆ. ಅಂತಹವರಲ್ಲಿ ಸ್ವಾಮಿ ಪರಮಾನಂದಪುರಿಯ ಶಿಷ್ಯರಾಗಿದ್ದ ಬಹುಶಃ ೧೫ನೇ ಶತಮಾನದಲ್ಲಿದ್ದ ಶ್ರೀಧರ ಸ್ವಾಮಿಗಳು 'ಸುಬೋಧಿನೀ' ಎಂಬ ಟೀಕೆಯನ್ನು ಬರೆದಿದ್ದಾರೆ. ಇದನ್ನು ಕನ್ನಡಕ್ಕೆ ಅನುವಾದಿಸಿರುವವರು ಸ್ವಾಮಿ ಜಪಸಿದ್ಧಾನಂದರು. ಅನುವಾದದ ಕ್ರಮ ಹೀಗಿದೆ - ಗೀತೆಯ ಶ್ಲೋಕ, ನಂತರ ತಾತ್ಪರ್ಯಾರ್ಥ, ಬಳಿಕ ಶ್ರೀಧರ ಸ್ವಾಮಿಗಳ ಭಾಷ್ಯ, ನಂತರ ಅದರ ಕನ್ನಡಾನುವಾದ. ಶ್ರೀಧರ ಸ್ವಾಮಿಗಳು ಭಾಷ್ಯದಲ್ಲಿ ಭಕ್ತಿಗೆ ಪ್ರಾಧಾನ್ಯ ಕೊಟ್ಟಿರುವುದು ಎದ್ದು ಕಾಣುತ್ತದೆ. ಅನುವಾದಕರು ವಾಚಕರಿಗೆ ಈ ಪುಸ್ತಕವನ್ನು ಓದಲು ಅನುಕೂಲವಾಗಲೆಂದು ಅನುವಾದದ ಶೈಲಿ, ಟೀಕೆಯ ಶೈಲಿ, ಇತ್ಯಾದಿಗಳನ್ನು ವಿವರಿಸಿ ಕೆಲವು ಸೂಚನೆಗಳನ್ನು ನೀಡಿದ್ದಾರೆ.

೨.೫ ಶ್ರೀಮದ್ ಭಗವದ್ಗೀತೆ (ಚಿಂತನ-ಮಂಥನ)

ಸ್ವಾಮಿ ನಿತ್ಯಸ್ಥಾನಂದರ ಈ ಪುಸ್ತಕವು ಭಗವದ್ಗೀತೆಯನ್ನು ಕುರಿತಾದ ಸ್ವತಂತ್ರ ಲೇಖನಗಳ ಸಂಗ್ರಹ. ಭಗವದ್ಗೀತೆಯಲ್ಲಿ ಬರುವ ಮುಖ್ಯ ವಿಷಯಗಳ ವಿಶ್ಲೇಷಣಾತ್ಮಕ ಲೇಖನಗಳಿವು. ಪ್ರಸ್ತುತ ಸಾಮಾಜಿಕ ಪರಿಸ್ಥಿತಿಯನ್ನೂ, ಆಧುನಿಕ ಯುವಕರು ಎದುರಿಸಬೇಕಾದ ಸವಾಲುಗಳನ್ನೂ, ಪರಿಹಾರರೂಪವಾದ ಮನೋವೈಜ್ಞಾನಿಕ ಚಿಂತನೆಗಳನ್ನು ಈ ಲೇಖನಗಳಲ್ಲಿ ನಾವು ಕಾಣಬಹುದು. ಪ್ರಸ್ತುತ ಸಮಾಜದಲ್ಲಿ ಕಾಡುತ್ತಿರುವ ಸಮಸ್ಯೆಗಳಿಗೆ ಭಗವದ್ಗೀತೆಯಲ್ಲಿ ಸಿಗುವ ಪರಿಹಾರಗಳೇ ಈ ಪುಸ್ತಕದ ವಿಷಯವಸ್ತು. ಇದಕ್ಕೆ ಮುನ್ನುಡಿಯನ್ನು ಹಿರಿಯ ಗ್ರಂಥಕರ್ತೃ ಹಾಗು ವಿದ್ವಾಂಸರಾದ ಸ್ವಾಮಿ ಜಗದಾತ್ಮಾನಂದರು ಬರೆದು ಕೊಟ್ಟಿರುತ್ತಾರೆ. ಇದು ಭಗವದ್ಗೀತೆಯ ಅಧ್ಯಾಯಗಳ ಅನುಸಾರವಾಗಿ ಪ್ರತಿಯೊಂದು ಅಧ್ಯಾಯದಲ್ಲೂ ಬರುವ ಮುಖ್ಯ ಭಾವನೆಗಳ ಒಂದು ಸಂಕಲನ. ಶ್ರೀರಾಮಕೃಷ್ಣರ, ಸ್ವಾಮಿ ವಿವೇಕಾನಂದರ ಭಾವಧಾರೆಯನ್ನು ಅನುಸರಿಸಿ ಬೇರೆ ಬೇರೆ ಶೀರ್ಷಿಕೆಯಡಿ ವಿಮರ್ಶೆ ನೀಡಲಾಗಿದೆ. 'ಭಗವದ್ಗೀತೆ ಎಂದರೇನು?' ಎಂಬ ಅಧ್ಯಾಯದಿಂದ

ಪ್ರಾರಂಭ ಮಾಡಿ, 'ಆತ್ಮವಿಚಾರ', 'ನಿಷ್ಕಾಮ ಕರ್ಮ', 'ಜ್ಞಾನ-ಕರ್ಮ-ಸಮುಚ್ಚಯ', 'ಅವತಾರ ತತ್ತ್ವ' 'ಯಜ್ಞದೃಷ್ಟಿ', 'ಜ್ಞಾನ ಮತ್ತು ವಿಜ್ಞಾನ', ಇತ್ಯಾದಿ ವಿಚಾರಧಾರೆಗಳನ್ನೊಳಗೊಂಡು 'ಶರಣಾಗತಿ'ಯಲ್ಲಿ ಕೊನೆಗೊಳ್ಳುತ್ತದೆ, ಈ ಪುಸ್ತಕ.

೨.೬ ಗೀತಾ ಪರಿಚಯ

ಸ್ವಾಮಿ ಅವಿನಾಶಾನಂದರು ಆಂಗ್ಲಭಾಷೆಯಲ್ಲಿ ಬರೆದಿರುವ ಈ ಪುಸ್ತಕಕ್ಕೆ ಭಾರತದ ಮಾಜಿ ರಾಷ್ಟ್ರಪತಿಗಳಾದ ಎಸ್. ರಾಧಾಕೃಷ್ಣನ್ ಮುನ್ನುಡಿ ಬರೆದಿದ್ದಾರೆ. ಈ ಪುಸ್ತಕವನ್ನು ಕನ್ನಡಕ್ಕೆ ಶ್ರೀ ಎಮ್. ಶೇಷಗಿರಿರಾಯರು ಭಾಷಾಂತರ ಮಾಡಿದ್ದಾರೆ. ಇದರಲ್ಲೂ ಸಹ ಸ್ವಾತಂತ್ರ್ಯದ ನಂತರ ಭಾರತೀಯ ಸಮಾಜದಲ್ಲಿ ಕಂಡುಬಂದಂತಹ ಸಮಸ್ಯೆಗಳಿಗೆ ಪರಿಹಾರವನ್ನು ಭಗವದ್ಗೀತೆಯ ಮೂಲಕ ನೀಡಲು ಪ್ರಯತ್ನಪಟ್ಟಿದ್ದಾರೆ. 'ಗೀತೆಯ ತಿರುಳನ್ನು ತಿಳಿ' ಎಂಬ ಅಧ್ಯಾಯದಿಂದ ಶುರು ಮಾಡಿ 'ಗೀತೆ ಎಂದರೇನು?', 'ಗುರು-ಶಿಷ್ಯ', 'ಏಳುನೂರೇಕೆ?' 'ಗೀತೆಯನ್ನು ಏಕೆ ಓದಬೇಕು?' 'ಕರ್ಮಣ್ಯೇವಾಧಿಕಾರಸ್ತೇ', 'ಆತ್ಮಾರ್ಪಣದ ಪುನರ್ವಿಮರ್ಶೆ', 'ಗೀತಾಸಾರ', 'ಗೀತೆಯಲ್ಲಿರುವ ಪರಮಾತ್ಮನ ಆಜ್ಞೆಗಳು' ಮುಂತಾದ ಅಧ್ಯಾಯಗಳನ್ನು ಕಾಣಬಹುದು.

೨.೭ ವಿದ್ಯಾರ್ಥಿಗಳಿಗೆ ಭಗವದ್ಗೀತೆ

ಈ ಕಿರುಹೊತ್ತಿಗೆಯನ್ನು ಮೂಲತಃ ಆಂಗ್ಲದಲ್ಲಿ ಸ್ವಾಮಿ ಆತ್ಮಶ್ರದ್ಧಾನಂದರು ಸಂಕಲಿಸಿ ಸಂಪಾದಿಸಿದ್ದರು. ಇದರಲ್ಲಿ ವಿದ್ಯಾರ್ಥಿಗಳಿಗೆ ಭಗವದ್ಗೀತೆಯ ಕೆಲವು ಪ್ರಮುಖ ಮೌಲ್ಯಗಳನ್ನು ಸರಳವಾಗಿ ಮನಸ್ಸು ಸುಲಭವಾಗಿ ಗ್ರಹಿಸುವಂತೆ ನೀಡಲಾಗಿತ್ತು. ಅದರದೇ ಕನ್ನಡಾನುವಾದ ಕರ್ನಾಟಕದ ವಿದ್ಯಾರ್ಥಿಗಳಿಗೂ ಉಪಯೋಗವಾಗಲಿ ಎಂಬ ಉದ್ದೇಶದಿಂದ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಹೊರತಂದಿದೆ. 'ದೈವತ್ವವೇ ನಿಮ್ಮ ನಿಜಸ್ವರೂಪ', 'ನಿಮ್ಮ ಅದೃಷ್ಟವನ್ನು ನೀವೇ ರೂಪಿಸಿಕೊಳ್ಳಿ', 'ಶರೀರ, ಮನಸ್ಸು ಮತ್ತು ಮಾತಿನ ನಿಗ್ರಹ', 'ಕ್ರೋಧ ನಿಗ್ರಹ', 'ಮನಸ್ಸಿನ ಏಕಾಗ್ರತೆ', 'ಸಂತೋಷದ ಆಯಾಮಗಳು', 'ಕೂಡಿ ಬಾಳಲು ಕಲಿಯಿರಿ' ಇತ್ಯಾದಿ ಮೌಲ್ಯಗಳನ್ನು ಕೊಡಲಾಗಿದೆ.

೨.೮ ಗೀತೆಯ ಇತರ ಗ್ರಂಥಗಳು

ಇಷ್ಟೇ ಅಲ್ಲದೆ ಭಗವದ್ಗೀತೆಯ ನಿತ್ಯ ಪಾರಾಯಣಕ್ಕಾಗಿ ಸಾಮಾನ್ಯ ಅಕ್ಷರಗಳನ್ನು ಒಳಗೊಂಡ ಹಾಗೂ ದಪ್ಪ ಅಕ್ಷರಗಳನ್ನೊಳಗೊಂಡ ೨ ಪಾರಾಯಣ ಗ್ರಂಥಗಳು ಮತ್ತು ಸ್ವಾಮಿ ಆದಿದೇವಾನಂದರೇ ಸರಳ ಅರ್ಥವನ್ನು ಕೊಟ್ಟಿರುವ ಮತ್ತೊಂದು ಕಿರುಪುಸ್ತಕವನ್ನೂ ಹೊರತರಲಾಗಿವೆ.

ಮೇಲೆ ಹೇಳಿದ ಎಲ್ಲಾ ಗ್ರಂಥಗಳನ್ನು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಿಂದ ಪ್ರಕಾಶಿಸಲಾಗುತ್ತಿದೆ.

೩. ಬ್ರಹ್ಮಸೂತ್ರಗಳು



ಬಾದರಾಯಣ ವ್ಯಾಸರಿಂದ ಪ್ರಣೀತವಾದ ಬ್ರಹ್ಮಸೂತ್ರ ಗಳಲ್ಲಿ ಎಲ್ಲಾ ಉಪನಿಷತ್ತುಗಳ ಸಾರವನ್ನು ೫೫೫ ಸೂತ್ರಗಳಲ್ಲಿ ಸಂಗ್ರಹಿಸಲಾಗಿದೆ. ಸನಾತನ ಧರ್ಮದ ಅಂಗವಾಗಿ ಪ್ರಸ್ತುತ ಅನೇಕ ಧಾರ್ಮಿಕ ಸಂಪ್ರದಾಯಗಳು ಅನುಷ್ಠಾನದಲ್ಲಿವೆ. ಅವುಗಳನ್ನು ಪ್ರತಿಷ್ಠಾಪಿಸಲು ಹೊರಟ ಪ್ರತಿಯೊಬ್ಬ ದಾರ್ಶನಿಕರೂ ಸಂಪ್ರದಾಯವು ಸುಪ್ರತಿಷ್ಠಿತವಾಗಿ ನಿಲ್ಲಲು ಬ್ರಹ್ಮಸೂತ್ರಗಳೆಂಬ ಭದ್ರವಾದ ಅಡಿಪಾಯದ ಮೇಲೆ ಭಾಷ್ಯವನ್ನು ಬರೆದಿರುತ್ತಾರೆ. ವೇದಾಂತ ದರ್ಶನವನ್ನು ಆಮೂಲಾಗ್ರವಾಗಿ ತಿಳಿಯಲು ಹೊರಟರೆ ಬ್ರಹ್ಮಸೂತ್ರಗಳ ಅಧ್ಯಯನ ಕಡ್ಡಾಯ. ಆದರೆ ಶಾರೀರಕ- ಮೀಮಾಂಸಾಶಾಸ್ತ್ರ ಅಥವಾ ಶಾರೀರಕಸೂತ್ರಗಳು ಎಂದು ಕರೆಯಲ್ಪಡುವ ಇವು ಉಪನಿಷತ್ತಿಗಿಂತಲೂ ಅರಿಯಲು ಕಠಿಣ; ಕಬ್ಬಿಣದ ಕಡಲೆ.

ಸ್ವಾಮಿ ಆದಿದೇವಾನಂದರು ಬ್ರಹ್ಮಸೂತ್ರಗಳನ್ನು ಅನುವಾದಿಸುವಲ್ಲಿ ಅನುಸರಿಸಿರುವ ಕ್ರಮ ಹೀಗಿದೆ - ಸೂತ್ರ, ಸೂತ್ರದ ಅರ್ಥ, ನಂತರ ಶಾಂಕರಭಾಷ್ಯದ ಸಂಗ್ರಹವನ್ನು ಸಂಶಯ -ಪೂರ್ವಪಕ್ಷ- ಸಿದ್ಧಾಂತ-ಪೂರ್ವಕವಾಗಿ ಕೊಡಲಾಗಿದೆ. ಈ ಭಾಷ್ಯದಲ್ಲಿ ಹೇಳದಿರುವ ವಿಷಯಗಳನ್ನು ರಾಮಾನುಜಾಚಾರ್ಯರ ಶ್ರೀಭಾಷ್ಯದಿಂದ ಸಂಗ್ರಹಿಸಿ ಕೊಡಲಾಗಿದೆ. ಇವೆರಡೂ ಭಾಷ್ಯಗಳಿಗೆ ಸ್ವಪಕ್ಷದ ಸಿದ್ಧಾಂತವನ್ನು ಬಿಟ್ಟರೆ ಸೂತ್ರಾರ್ಥದ ವ್ಯಾಖ್ಯಾನದಲ್ಲಿ ಹೆಚ್ಚು ಭೇದವಿಲ್ಲ. ಸೂತ್ರಾರ್ಥವು ಭಿನ್ನವಾಗಿರುವಾಗ ಭಾಷಾಂತರವನ್ನು ಬೇರೆ ಬೇರೆಯಾಗಿ ಕೊಡಲಾಗಿದೆ. ನಂತರ ದ್ವೈತ ಮತಾನುಸಾರ ಶ್ರೀಮನ್ಮಧ್ವಾಚಾರ್ಯರ ಸೂತ್ರಭಾಷ್ಯವನ್ನು ಕೊಡಲಾಗಿದೆ. ಅದಲ್ಲದೇ ಪಾರಿಭಾಷಿಕ ಶಬ್ದಗಳಿಗೆ ಟಿಪ್ಪಣಿಯನ್ನು ಕೊಡಲಾಗಿದೆ.

ಈ ಪುಸ್ತಕದ ಪೀಠಿಕೆಯಲ್ಲಿ ಸೂತ್ರಗಳೆಂದರೇನು? ಬ್ರಹ್ಮಸೂತ್ರಗಳ ಪರಿಚಯ, ಪಂಡಿತರ ಪ್ರಕಾರ ಕರ್ತೃವಿನ ಕಾಲ ನಿರ್ಧಾರ, ಸೂತ್ರಗಳಿಗೂ ಉಪನಿಷತ್ತಿಗೂ ಇರುವ ಸಂಬಂಧದ ವಿಶ್ಲೇಷಣೆ, ಸೂತ್ರಗಳಲ್ಲಿ ಕಂಡುಬರುವಂತಹ ಬಾದರಾಯಣರಿಗಿಂತ ಹಿಂದೆ ಇದ್ದಂತಹ ಆಚಾರ್ಯರು ಮತ್ತು ಅವರ ಮತಗಳನ್ನು ಸೂಚಿಸಿರುವ ಬ್ರಹ್ಮಸೂತ್ರಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ತದನಂತರ ಸೂತ್ರಗಳಲ್ಲಿರುವ ವಿಷಯಗಳು, ವೇದಾಂತ ದರ್ಶನದಲ್ಲಿ ಬಳಸಿರುವ ಪ್ರಮಾಣಗಳು, ಪರಬ್ರಹ್ಮ, ಜೀವ ಮತ್ತು ಉತ್ಕ್ರಾಂತಿ ಎಂಬ ತತ್ತ್ವಗಳನ್ನು ವಿಮರ್ಶಿಸಿ, ಭಾಷ್ಯಕಾರರ ಮತ

ಗಳನ್ನು ಅತ್ಯಂತ ಸಂಕ್ಷೇಪವಾಗಿ ವಿವರಿಸಿ, ಉಪಸಂಹಾರ ಮಾಡಿ ಪೀಠಿಕೆಗೆ ತೆರೆ ಎಳೆದಿದ್ದಾರೆ.

ಈ ಗ್ರಂಥದ ಉದ್ದೇಶ ಆಚಾರ್ಯತ್ರಯರ ಸೂತ್ರಭಾಷ್ಯಗಳ ಸಂಗ್ರಹವನ್ನು ಆದಷ್ಟು ಅವರ ಶೈಲಿಯಲ್ಲಿಯೇ ಕೊಡುವುದು; ಭಾಷ್ಯಗಳನ್ನು ಪರಸ್ಪರ ಹೋಲಿಸಿ ನಿರ್ಣಯ ಕೊಡುವುದು ಈ ಪುಸ್ತಕದ ಉದ್ದೇಶವಲ್ಲ. ಭಾಷ್ಯಗಳನ್ನು ಸಂಗ್ರಹಿಸುವಾಗ ಆವೃತ್ತಿಯಾಗಿ ಬರುವಂತಹ ಅಂಶಗಳನ್ನೂ, ದೃಷ್ಟಾಂತಗಳನ್ನೂ ಮತ್ತು ಸೂತ್ರಕ್ಕೆ ನೇರವಾಗಿ ಸಂಬಂಧವಿರದ ವಿಷಯಗಳನ್ನೂ ತ್ಯಜಿಸಿ ಭಾಷ್ಯದ ಮೂಲರೂಪವನ್ನು ಸರಳವಾಗಿ ಇಡಲು ಪ್ರಯತ್ನಿಸಿದ್ದಾರೆ. ಈ ಬೃಹದ್ಗ್ರಂಥವನ್ನು ಶ್ರೀರಾಮಕೃಷ್ಣ ಆಶ್ರಮ, ಮೈಸೂರಿನಿಂದ ಪ್ರಕಟಿಸಲಾಗುತ್ತಿದೆ.

೪. ಪ್ರಕರಣ ಗ್ರಂಥಗಳು

ವೇದಾಂತ ದರ್ಶನದ ಯಾವುದಾದರೂ ಒಂದು ಅಂಶವನ್ನು ತೆಗೆದುಕೊಂಡು ಅದನ್ನೇ ವಿಸ್ತಾರವಾಗಿ ವಿವರಿಸುತ್ತಾ ಮನದಟ್ಟು ಮಾಡುವುದು ಪ್ರಕರಣ ಗ್ರಂಥಗಳ ವಿಷಯವಾಗಿರುತ್ತದೆ. ಈ ಪ್ರಕರಣ ಗ್ರಂಥಗಳ ಪಟ್ಟಿ ಬಹಳ ವಿಸ್ತಾರವಾದದು. ಅದರೆ ಅವುಗಳಲ್ಲಿ ಪ್ರಮುಖವಾದವು – ವಿವೇಕಚೂಡಾಮಣಿ, ಜೀವನ್ಮುಕ್ತಿವಿವೇಕ, ಪಂಚದಶೀ, ವೇದಾಂತಸಾರ, ಅವಧೂತಗೀತಾ, ಅಷ್ಟಾವಕ್ರಗೀತಾ ಮೊದಲಾದವುಗಳು. ಶ್ರದ್ಧಾಳು ಸಾಧಕನಿಗೆ ಈ ಪ್ರಕರಣಗ್ರಂಥಗಳೇ ಅಧ್ಯಾತ್ಮಿಕ ಜೀವನದ ಪ್ರಾರಂಭದಲ್ಲಿ ಆಲಂಬನವಾಗುವುವು.

೪.೧. ವಿವೇಕಚೂಡಾಮಣಿ: ಅದ್ವೈತ ವೇದಾಂತದ ಆಧುನಿಕ ಪ್ರವರ್ತಕರಾದ ಶಂಕರಾಚಾರ್ಯರೇ ರಚಿಸಿದ ವಿವೇಕಚೂಡಾಮಣಿಯು ಜನಪ್ರಿಯವಾಗಿದೆ. ಗ್ರಂಥಕರ್ತರು ತಮ್ಮ ಆತ್ಮಾನುಭವದ ನಿಲುವಿನಿಂದ ಉಪದೇಶಿಸುತ್ತಿರುವುದರಿಂದ ಇದು ಹೃದಯಸ್ಪರ್ಶಿಯಾಗಿದೆ. ಸಾಧಾರಣರಿಗೆ ಕೃತಿಯ ಶೈಲಿಯು ಕಾವ್ಯಗುಣಗಳಿಂದ ಕೂಡಿದ್ದು ಮನೋಹಾರಿಯಾಗಿದೆ.



ಈ ಗ್ರಂಥದ ಮುಖ್ಯಾಂಶವೇ ವಿವೇಕ, ಅಂದರೆ ಬೇರೆ ಬೇರೆ ಮಾಡುವ ಪ್ರಕ್ರಿಯೆ. ಉದಾಹರಣೆಗೆ, ಆತ್ಮ–ಅನಾತ್ಮ ವಿವೇಕ ಅಂದರೆ ಆತ್ಮನನ್ನು ಅನಾತ್ಮ ವಸ್ತುವಿನಿಂದ ಬೇರ್ಪಡಿಸುವುದು. ಈ ಭಾವನೆಯೇ ಪದೇ ಪದೇ ಕಂಡುಬರುವುದರಿಂದ ವಿವೇಕ ಚೂಡಾಮಣಿಯು ತನ್ನ ಹೆಸರನ್ನು ಪಡೆದುಕೊಂಡಿದೆ. ನಿತ್ಯಾನಿತ್ಯವಸ್ತು–ವಿವೇಕವೇ ಉಪನಿಷತ್ತುಗಳ ರಹಸ್ಯ ಎಂದು ಗ್ರಂಥ ಕರ್ತೃವು ನಿವೇದಿಸಿಕೊಂಡಿದ್ದಾರೆ. ಅನುವಾದಕರಾದ ಸ್ವಾಮಿ ಆದಿ ದೇವಾನಂದರು ಅನ್ವಯ, ಪದಶಃ ಅರ್ಥ ಮತ್ತು ತಾತ್ಪರ್ಯ ಟಿಪ್ಪಣಿಗಳನ್ನು ನೀಡಿದ್ದಾರೆ. ಈ ಗ್ರಂಥದ ಪಾಠವನ್ನು ಸಂಪಾದಿಸುವಾಗ ಮತ್ತು ಶ್ಲೋಕಗಳ ಅರ್ಥವನ್ನು ವಿವರಿಸುವಾಗ ಮುನಿಮಂಡಲದ ಕೇಶವಾಚಾರ್ಯಸ್ವಾಮಿಗಳ ಮತ್ತು ಶೃಂಗೇರಿ ಜಗದ್ಗುರುಗಳಾಗಿದ್ದ ಶ್ರೀ ಚಂದ್ರಶೇಖರ ಭಾರತಿ ಮಹಾಸ್ವಾಮಿಗಳ ಸಂಸ್ಕೃತ ವ್ಯಾಖ್ಯಾನಗಳ ಸಹಾಯ ಪಡೆಯಲಾಗಿದೆ. ಗ್ರಂಥದ ಕೊನೆ ಯಲ್ಲಿ ಶ್ಲೋಕಗಳ ಅಕಾರಾದಿ ಸೂಚಿಯನ್ನು ನೀಡಲಾಗಿದೆ. ಇದೂ ಸಹ ಮೈಸೂರು ಶ್ರೀರಾಮಕೃಷ್ಣ ಆಶ್ರಮದಿಂದ ಪ್ರಕಟವಾಗುತ್ತಿದೆ.

೪.೨ ಪಂಚದಶೀ : ವಿದ್ವಾಂಸರಿಂದ ಬಹುಮಾನ್ಯತೆ ಪಡೆದ ಮತ್ತೊಂದು ಪ್ರಕರಣ ಗ್ರಂಥವೆಂದರೆ ಶೃಂಗೇರಿಯ ವಿಖ್ಯಾತ ಪೀಠಾಧೀಶರಾಗಿದ್ದ, ವಿಜಯನಗರ ಸಾಮ್ರಾಜ್ಯದ ಕುಲಗುರುಗಳೂ ಆಗಿದ್ದ ವಿದ್ಯಾರಣ್ಯ ಸ್ವಾಮಿಗಳಿಂದ ರಚನೆಗೊಂಡ ಪಂಚದಶೀ. ಈ ಗ್ರಂಥದಲ್ಲಿ ೧೫ ಪ್ರಕರಣಗಳಿರುವುದರಿಂದ ಈ ಹೆಸರು ಕೊಟ್ಟಿದ್ದಾರೆ. ಈ ಹೊತ್ತಿಗೆಯನ್ನು ಸಹ ಕನ್ನಡಕ್ಕೆ ಆದಿದೇವಾನಂದರೇ ಅನುವಾದಿಸಿದ್ದಾರೆ. ಆದರೆ ಇದರಲ್ಲಿ ಅನ್ವಯವಾಗಲೀ ಪದಶಃ ಅರ್ಥವಾಗಲೀ ಕೊಟ್ಟಿಲ್ಲ. ಸರಳ ಕನ್ನಡದಲ್ಲಿ ನೇರ ಅನುವಾದ ಮಾಡಿ ಟಿಪ್ಪಣಿಗಳನ್ನು ಕೊಡಲಾಗಿದೆ. ಅನುವಾದಕರು ಪೀಠಿಕೆಯಲ್ಲಿ ಗ್ರಂಥದ ಹಾಗೂ ಗ್ರಂಥಕರ್ತೃವಾದ ಶ್ರೀ ವಿದ್ಯಾರಣ್ಯರ ಸಂಕ್ಷಿಪ್ತ ಪರಿಚಯ ಮಾಡಿ, ಅವರ ಇನ್ನಿತರ ಗ್ರಂಥಗಳನ್ನು ಪರಿಚಯಿಸಿದ್ದಾರೆ. ಇದಲ್ಲದೆ ಪಂಚದಶಿಯ ಬಗ್ಗೆಯೂ ವಿಶ್ಲೇಷಿಸಿದ್ದಾರೆ. ಇದಾದ ನಂತರ ಪ್ರಮಾಣಗಳು ಮತ್ತು ದರ್ಶನಗಳಲ್ಲಿ ಅವುಗಳ ಮಹತ್ತ್ವ, ಪರಬ್ರಹ್ಮದ ಸತ್ – ಸ್ವರೂಪ, ಚಿತ್–ಸ್ವರೂಪ ಮತ್ತು ಆನಂದ ಸ್ವರೂಪ – ಈ ವಿಷಯಗಳನ್ನು ಚರ್ಚಿಸಲಾಗಿದೆ.

ಆದಿದೇವಾನಂದರು ಅನುವಾದ ಮಾಡುವಲ್ಲಿ ರೂಢಿಯಲ್ಲಿರುವ ಸಂಸ್ಕೃತಪದಗಳನ್ನೇ ಆದಷ್ಟು ಬಳಸಿದ್ದಾರೆ. ಅವರೇ ತಿಳಿಸಿರುವಂತೆ ಅಪರಿಚಿತವಾದ ಸಂಸ್ಕೃತ–ಕನ್ನಡ–ಪದಗಳನ್ನು ಪ್ರಯೋಗಿಸಿಲ್ಲ. ಅನುವಾದ ಮಾಡುವಾಗ ರಾಮಕೃಷ್ಣ ಪಂಡಿತರ ಅರ್ಥಗರ್ಭಿತವಾದ ವ್ಯಾಖ್ಯಾನವನ್ನು ಬಳಸಿಕೊಳ್ಳಲಾಗಿದೆ. ಇದನ್ನೂ ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಪ್ರಕಟಪಡಿಸುತ್ತಾ ಬಂದಿದೆ.

೪.೩ ಜೀವನ್ಮುಕ್ತಿವಿವೇಕ : ವಿದ್ಯಾರಣ್ಯ ಯತಿಗಳ ಮತ್ತೊಂದು ಮೇರುಕೃತಿಯಾದ ಜೀವನ್ಮುಕ್ತಿವಿವೇಕವನ್ನು ಸ್ವಾಮಿ ಹರ್ಷಾನಂದರು ಟಿಪ್ಪಣಿ ಸಹಿತ ಅನುವಾದಿಸಿದ್ದಾರೆ. ಅವರು ಗ್ರಂಥವನ್ನು ಪರಿಚಯಿಸುತ್ತಾ ಪಂಚದಶಿಯಲ್ಲಿ ಅದ್ವೈತ ತತ್ತ್ವವನ್ನು ವಿಸ್ತಾರವಾಗಿ ಮಂದಮತಿಗಳಿಗೂ ಅರ್ಥವಾಗುವಂತೆ ಪ್ರತಿಪಾದಿಸಿದ್ದಾರೆ, ಆದರೆ ಈ ಗ್ರಂಥದದ ವಿಷಯ ಅದ್ವೈತ ತತ್ತ್ವದ ಸಾಕ್ಷಾತ್ಕಾರ ಅಥವಾ ಜೀವನ್ಮುಕ್ತಿಯೇ. ಇದರಲ್ಲಿ ಐದು ಪ್ರಕರಣಗಳಿವೆ. ಇವುಗಳ ಸರಳ ಭಾವಾನುವಾದ ಮತ್ತು ಅವಶ್ಯವಿದ್ದಲ್ಲಿ

ಟಿಪ್ಪಣಿಗಳನ್ನು ನೀಡಲಾಗಿದೆ. ಅನುವಾದಕ್ಕೆ ಥಿಯೋಸಾಫಿಕಲ್ ಪಬ್ಲಿಶಿಂಗ್ ಹೌಸ್ ಇವರಿಂದ ಪ್ರಕಾಶಿತವಾದ ಪಂಡಿತ್ ಎಸ್. ಸುಬ್ರಮಣ್ಯ ಶಾಸ್ತ್ರಿ ಮತ್ತು ಟಿ.ಆರ್.ಶ್ರೀನಿವಾಸ್ ಅಯ್ಯಂಗಾರ್ ಇವರಿಂದ ಆಂಗ್ಲಭಾಷೆಗೆ ಅನುವಾದಗೊಂಡ ಪುಸ್ತಕವನ್ನು ಆಶ್ರಯಿಸಿದ್ದಾರೆ. ಇದಕ್ಕೆ ಮುನ್ನುಡಿಯನ್ನು ಸ್ವಾಮಿ ಆದಿದೇವಾನಂದರು ಬರೆಯುತ್ತಾ ಅದರಲ್ಲಿ ಗ್ರಂಥಕರ್ತೃವಿನ ಪರಿಚಯ, ಗ್ರಂಥದ ಪರಿಚಯ, ಜೀವನ್ಮುಕ್ತಿ-ವಿದೇಹಮುಕ್ತಿಯ ವ್ಯತ್ಯಾಸವನ್ನು ಓದುಗರಿಗೆ ತಿಳಿಸಿಕೊಟ್ಟಿದ್ದಾರೆ. ಮೊದಲು ಇದನ್ನು ಬೆಂಗಳೂರಿನ ರಾಮಕೃಷ್ಣ ಮಠ ಪ್ರಕಾಶಿಸಿದ್ದರೂ ಪ್ರಸ್ತುತ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಮುದ್ರಿಸುತ್ತಿದೆ.

೪.೪ ವೇದಾಂತಸಾರ : ಸ್ವಾಮಿ ಹರ್ಷಾನಂದರು ಅನುವಾದ ಮಾಡಿರುವ ಮತ್ತೊಂದು ಮುಖ್ಯ ಪ್ರಕರಣ ಗ್ರಂಥವೆಂದರೆ ಸದಾನಂದ ಯೋಗೀಂದ್ರ ರಚಿತ ವೇದಾಂತಸಾರ. ಇದು ಪ್ರಕರಣ ಗ್ರಂಥಗಳಲ್ಲಿ ಪ್ರಾಥಮಿಕವಾದುದು ಎಂದು ವಿದ್ವಾಂಸರು ಒಪ್ಪುತ್ತಾರೆ. ಈ ಕಿರು ಹೊತ್ತಿಗೆಗೆ ಆರು ಸಂಸ್ಕೃತ ವ್ಯಾಖ್ಯಾನಗಳು ಇವೆ. ಅನುವಾದಕರು ಆಪದೇವರ 'ಬಾಲಬೋಧಿನೀ',ಶ್ರೀನೃಸಿಂಹ ಸರಸ್ವತಿಗಳ 'ಸುಬೋಧಿನೀ' ಮತ್ತು ಶ್ರೀರಾಮತೀರ್ಥರ 'ವಿದ್ವನ್ಮನೋರಂಜಿನೀ' ಎಂಬ ವ್ಯಾಖ್ಯಾನಗಳನ್ನು ಉಪಯೋಗಿಸಿಕೊಂಡು ಅನುವಾದ ಮಾಡಿರುತ್ತಾರೆ. ಗ್ರಂಥದ ಪೀಠಿಕೆಯಲ್ಲಿ ಸ್ವಾಮಿ ಹರ್ಷಾನಂದರು ಗ್ರಂಥದ ಸಾರಾಂಶವನ್ನು ಸಂಕ್ಷೇಪವಾಗಿ ನೀಡಿದ್ದಾರೆ. ಶ್ರೀರಾಮಕೃಷ್ಣ ಆಶ್ರಮ, ಮೈಸೂರು - ಇವರು ಪ್ರಕಾಶಿಸುತ್ತಿರುವ ಈ ಗ್ರಂಥದಲ್ಲಿ ಅನುವಾದದೊಂದಿಗೆ ಪಾರಿಭಾಷಿಕ ಶಬ್ದಗಳನ್ನೂ ವಿವರಿಸಿ ಟಿಪ್ಪಣಿಗಳನ್ನು ನೀಡಲಾಗಿದೆ.

೪.೫ ಮತ್ತಿತರ ಪ್ರಕರಣ ಗ್ರಂಥಗಳು - ಶ್ರೀಮದ್ಭಗವತ್ಪಾದ ಶಂಕರರ ಇನ್ನಿತರ ಗ್ರಂಥಗಳಾದ 'ತತ್ತ್ವಬೋಧ'ವನ್ನು ಸ್ವಾಮಿ ವೀರೇಶಾನಂದರೂ, ಆತ್ಮಬೋಧ-ಅಪರೋಕ್ಷಾನುಭೂತಿ- ವಾಕ್ಯವೃತ್ತಿ-ಲಘುವಾಕ್ಯವೃತ್ತಿಗಳನ್ನು ಒಂದೇ ಹೊತ್ತಿಗೆಯಲ್ಲಿ ಸ್ವಾಮಿ ಹರ್ಷಾನಂದರೂ ಅನುವಾದಿಸಿದ್ದಾರೆ. ಮೇಲೆ ತಿಳಿಸಿದ ಪುಸ್ತಕಗಳನ್ನೂ ಇದಲ್ಲದೆ ವಿದ್ಯಾರಣ್ಯರ ದೃಗ್ದೃಶ್ಯವಿವೇಕ ಮತ್ತು ಆಚಾರ್ಯತ್ರಯರ ಸಿದ್ಧಾಂತ ಸಮೀಕ್ಷೆ - ಇವನ್ನೂ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಪ್ರಕಟಿಸುತ್ತಾ ಬಂದಿದೆ.

ಉಪಸಂಹಾರ

ಅಧ್ಯಾತ್ಮವಿದ್ಯಾ ವಿದ್ಯಾನಾಂ... (ವಿದ್ಯೆಗಳಲ್ಲೆಲ್ಲಾ ಅಧ್ಯಾತ್ಮ ವಿದ್ಯೆಯಲ್ಲಿ ಪರಮಾತ್ಮನ ವಿಶೇಷ ಅಸ್ತಿತ್ವವಿದೆ) ಎಂದು ಗೀತಾಚಾರ್ಯ ಭಗವಾನ್ ಶ್ರೀಕೃಷ್ಣನು ಘೋಷಿಸಿದ್ದಾನೆ. 'ಗುರುಮುಖೀ ವಿದ್ಯಾ' - ಲೌಕಿಕ ವಿದ್ಯೆಯೋ ಪಾರಮಾರ್ಥಿಕ ವಿದ್ಯೆಯೋ, ವಿದ್ಯೆಯನ್ನು ಗುರುವಿನ ಶ್ರೀಮುಖದಿಂದ ಪಡೆದಲ್ಲಿ ಶಿಷ್ಯನ ಸಂಶಯಗಳೆಲ್ಲಾ ನಾಶವಾಗಿ ಜ್ಞಾನೋದಯವಾಗುವುದು, ಜೀವನವು ಸಾರ್ಥಕವಾಗುವುದು. ಆದರೆ ಅಂತಹ ಗುರು ಸಿಗಲು ಶಿಷ್ಯನು ತನ್ನನ್ನು ತಾನೇ ಅಣಿಗೊಳಿಸಿಕೊಳ್ಳಬೇಕು, ಸಿದ್ಧಗೊಳಿಸಿಕೊಳ್ಳಬೇಕು. ಈ ತಯಾರಿ ನಡೆಸಲು ರಾಮಕೃಷ್ಣ ಮಠದಿಂದ ಪ್ರಕಾಶಿಸಲಾದ ವೇದಾಂತ ಗ್ರಂಥಗಳು ಸಹಕಾರಿಯಾಗುತ್ತವೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಇವು ವೇದಾಂತದ ಸರಳ ಅರ್ಥವನ್ನೂ ತಾತ್ಪರ್ಯವನ್ನೂ ಮನದಟ್ಟು ಮಾಡಿಕೊಟ್ಟು ತದನಂತರ ಗುರುಗಳಿಂದ ಗಹನವಾದ ಗೂಢಾರ್ಥವನ್ನು ತಿಳಿಯಲು ಪೂರಕವಾಗುತ್ತವೆ. ✽

ಸ್ವಾಮಿ ವಿವೇಕಾನಂದರ ಭ್ರಾತೃಪ್ರೇಮ

ಒಂದು ಮಧ್ಯಾಹ್ನ ಸ್ವಾಮಿ ವಿವೇಕಾನಂದರು ಕಿರಿಯ ಸಂನ್ಯಾಸಿಗಳಿಗೆ ತರಗತಿತೆಗೆದುಕೊಂಡಿದ್ದರು. ಅದು ಸಂಜೆಯಾದರೂ ಮುಗಿಯಲಿಲ್ಲ. ಆರತಿಯ ಸಮಯವಾದರೂ ದೇವಾಲಯಕ್ಕೆ ಯಾರೂ ಬರದೇ ಇದ್ದುದನ್ನು ನೋಡಿದ ಪ್ರೇಮಾನಂದರು ತರಗತಿ ನಡೆಯುತ್ತಿದ್ದಲ್ಲಿಗೆ ಹೋಗಿ ಕಿರಿಯ ಸಂನ್ಯಾಸಿಗಳಿಗೆ 'ಏನು ಮಾಡುತ್ತಿರುವಿರಿ? ಆರತಿಗೆ ಬರುವುದಿಲ್ಲವೆ? ತರಗತಿ ಮುಗಿಸಿ ಬೇಗ ಬನ್ನಿ' ಎಂದು ಹೇಳಿದರು. ಸ್ವಾಮೀಜಿಗೆ ತಕ್ಷಣ ಕೋಪ ಬಂದು ಗರ್ಜಿಸಿದರು: 'ನಾನಿಲ್ಲಿ ಮಾಡುತ್ತಿರುವುದು ಪೂಜೆಯಲ್ಲವೆಂದು ನಿನ್ನ ಭಾವನೆಯೆ? ನೀನು ದೇವಸ್ಥಾನದಲ್ಲಿ ಗಂಟೆ ಹೊಡೆದುಬಿಟ್ಟರೆ, ಅದು ಮಾತ್ರ ಪೂಜೆಯೆ?' ಎಂದು ಒಂದೇ ಸಮನೆ ಪ್ರೇಮಾನಂದರನ್ನು ಬಯ್ಯಲಾರಂಭಿಸಿದರು. ಪ್ರೇಮಾನಂದರು ತಲೆ ತಗ್ಗಿಸಿಕೊಂಡರು. ಅವರು ಹೋಗಿ ತಾವೊಬ್ಬರೇ ಆರತಿಯನ್ನು ಮುಗಿಸಿ ನಂತರ ಅದೃಶ್ಯರಾದರು. ಎಲ್ಲ ಸಂನ್ಯಾಸಿಗಳೂ ಅವರನ್ನು ಹುಡುಕಿದರೂ ಸಿಕ್ಕಲಿಲ್ಲ. ಸ್ವಾಮೀಜಿ ತನ್ನ ಒರಟುತನವನ್ನು ಹಳಿದುಕೊಳ್ಳುತ್ತ, ದೇವಸ್ಥಾನಕ್ಕೆ ಹೋಗಿ ತನ್ನ ದುರ್ನಡತೆಗಾಗಿ ಕ್ಷಮಾಪಣೆಬೇಡುತ್ತ ಅಲ್ಲಿಯ ಹೊಸ್ತಿಲಿಗೆ ತಮ್ಮ ಹಣೆಯನ್ನು ಒಂದೇ ಸಮನೆ ಚಚ್ಚಿಕೊಳ್ಳಲು ಆರಂಭಿಸಿದರು. ಎಷ್ಟೊಂದು ಬಾರಿ ಎಷ್ಟು ರಭಸವಾಗಿ ಚಚ್ಚಿಕೊಂಡರೆಂದರೆ, ಹಣೆ ಒಡೆದು ರಕ್ತ ಹರಿಯಲಾರಂಭಿಸಿತು. ಕೊನೆಗೆ ಚಾವಣಿಯ ಮೇಲೆ ಹೋಗಿ ದುಃಖಿತರಾಗಿ ಕುಳಿತುಕೊಂಡಿದ್ದ ಪ್ರೇಮಾನಂದರು ಪತ್ತೆಯಾದರು. ಸಂನ್ಯಾಸಿಗಳೆಲ್ಲರೂ ಸೇರಿ ಅವರನ್ನು ಕೆಳಗಡೆ ಸ್ವಾಮೀಜಿ ಇದ್ದಲ್ಲಿಗೆ ಕರೆದುಕೊಂಡು ಬಂದರು. ಸ್ವಾಮೀಜಿ ಪ್ರೇಮಾನಂದರನ್ನು ಅಪ್ಪಿಕೊಂಡು ಅವರ ಕ್ಷಮೆ ಕೇಳಿದರು.

(ದೇವರೊಡನೆ ಬಾಳಿದವರು, ಭಾಗ ೧, ಪು. ೨೨೯-೩೦)